Programme of Business regarding discussion on questions.

Mr. SPEAKER.—Sri S. Srinivasa Iyengar has given notice under Rule 39 to raise discussion on the subject matter of Questions No. 212 and 213, regarding administration of the Bangalore Race Club, included in the list of business of the 17th July 1953. The notice has been admitted and discussion will take place at the conclusion of appointed business on Wednesday the 29th July 1953.

Sri U. M. Madappa has given notice under Rule 39 to raise discussion on the subject matter of question No. 315 regarding Mysore Silk Filatures included in the list of business of 21st July 1953. This notice has also been admitted and discussion will take place on Wednesday the 29th July after the discussion given notice of by Sri S. Srinivasa Iyengar is disposed of.

In the agenda today, item No. 4 is the discussion on matter of public importance arising out of Question No. 84, (VI Set) regarding selection and appointments of Junior Officers to the I.A.S. This is sent by Sri B. Hutche Gowda. He has sent me a written requisition authorising Sri Mulka Govinda Reddy to permit him to put this question. Sri Hutche Gowda is an in-patient in the Hospital. I will permit Sri Mulka Govinda Reddy to move it.

ANDHRA STATE BILL, 1953.

Motion to approve proposal to introduce in Parliament—(continued).

Mr. SPEAKER.—Now the general debate on the first motion with respect to the Andhra State Bill, 1953, will continue. That will be continued until 3-15 P.M. as announced day before yesterday.

*ಶ್ರೀ ಕೆ. ಪುಟ್ಟಸ್ವಾಮಿ (ಶ್ರೀರಂಗಪಟ್ಟಣ)— ಸ್ವಾಮಿ, ಬಳ್ಳಾರಿಯನ್ನು ಮೈಸೂರಿಗೆ ಸೇರಿಸುವ ವಿಚಾರದಲ್ಲಿ ಬಂದಿರತಕ್ಕ ಈ ಮಸೂದೆಗೆ ನನ್ನ ಹಾರ್ದಿಕವಾದ ಸ್ವಾಗತವನ್ನು ಬಯಸುತ್ತೇನೆ. ಈ ಸಮಯದಲ್ಲಿ ಈ ಹಿಂದೆ ಮಾತನಾಡಿದ ಮಾನ್ಯ ಸದಸ್ಯರ ಪೈಕಿ ಕೆಲವರು ಎಂದರೆ ಶ್ರೀಮಾನ್ ಎಚ್. ಕೆ. ವೀರಣ್ಣಗೌಡರೂ ಮತ್ತು ಶ್ರೀಮಾನ್ ಎಲ್. ಸಿದ್ದಪ್ಪನವರೂ ಈ ವಿಚಾರದಲ್ಲಿ ಮೈಸೂರಿನ ಜನರ ಅಭಿಪ್ರಾಯ ಹೇಗಿದೆಯೆಂಬುದನ್ನು ಸ್ಥೂಲವಾಗಿ ಹೇಳಿದ್ದಾರೆಂದು ನನ್ನ ಅಭಿಪ್ರಾಯ. ಇದನ್ನು ನಾನು ಒಪ್ಪುತ್ತೇನೆ. ಆದರೆ ಈ ಚರ್ಚೆ ನಡೆಯುತ್ತಿದ್ದಾಗ ಕೆಲವು ಸಂತೋಷಕರವಾದ ವಿಚಾರಗಳೂ ಹೊರಬಿದ್ದುವು. ಅವುಗಳಲ್ಲಿ ಮೊದಲನೆಯದು ಈ ಮಹಾ ಸಭೆಯ ನಾಯಕರಾದ ಶ್ರೀಮಾನ್ ಕೆ. ಹನುಮಂತಯ್ಯನವರದು. ಶ್ರೀಮಾನ್ ಹನುಮಂತಯ್ಯನವರು ಈ ಹಿಂದೆ ಮೈಸೂರಿನಿಂದ ಮಂಗಳೂರಿಗೆ ಹೋಗಿದ್ದಾಗ ಅಲ್ಲಿ ಈ ಕರ್ಣಾಟಕ ಏಕೀಕರಣದ ಬಗ್ಗೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತ ಕೇಂದ್ರ ಸರ್ಕಾರದವರು ಇಷ್ಟಪಟ್ಟರೆ ಅದನ್ನು ಕೇವಲ 24 ಘಂಟೆಗಳಲ್ಲೇ ಮಾಡಬಹುದೆಂಬುದಾಗಿ ಅಭಿಪ್ರಾಯಪಟ್ಟರೆಂಬುದಾಗಿ ಪತ್ರಿಕೆಗಳಲ್ಲಿ ವರದಿಯಾಗಿತ್ತು. ಇಡೀ ದೇಶದ ಅಭಿಪ್ರಾಯವೇ ಆ ರೀತಿಯಾಗಿರುತ್ತದೆಯೋ ಏನೋ ಅನ್ನುವ ರೀತಿಯಲ್ಲಿ ಮಾತನಾಡಿದ್ದಾರೆ. ಆದರೆ ಮೊನ್ನೆ ಈ ಸಭೆಯಲ್ಲಿ ಅಪ್ಪಣೆ ಕೊಡಿಸುವಾಗ ಅವರು ಹಿಂದೆ ಮಾತನಾಡಿದ್ದು ಅವರ ಕೇವಲ ವೈಯಕ್ತಿಕವಾದ ಅಭಿಪ್ರಾಯವೆಂದು ತಿಳಿಸಿದರು ; ಮತ್ತು ಹಾಗೆಯೇ ಮುಂದುವರಿದು ಈ ವಿಚಾರದಲ್ಲಿ ದೇಶದಲ್ಲಿರತಕ್ಕ ಜನಸಾಮಾನ್ಯರ ಅಭಿಪ್ರಾಯವೇನಿರುತ್ತದೆಯೋ ಅದೇ ನನ್ನ ಅಭಿಪ್ರಾಯವೂ ಕೂಡ ಆಗಿರುತ್ತದೆ ಎಂದು ಅವರು ವ್ಯಕ್ತಪಡಿಸಿದ್ದಾರೆ ಅದೊಂದು ಬಹಳ ಸಂತೋಷದ ವಿಚಾರ. ಈ ದೇಶದ ಮೇಲ್ಮನೆಯಲ್ಲಿ ಮಾತನಾಡುತ್ತ ಕರ್ಣಾಟಕ ಏಕೀಕರಣದ ವಿಚಾರವಾಗಿ ಯಾರೂ ಉದ್ರೇಕವಾದ ಭಾಷಣಗಳನ್ನು ಮಾಡಬಾರದೆಂದೂ, ಈ ದೇಶ ಕನ್ನಡ, ತೆಲುಗು, ತಮಿಳು ಮಾತನಾಡತಕ್ಕಂಥವರ ದೇಶವಾಗಿದೆ ಎಂದೂ, ಇದು ಮಿಶ್ರ ಭಾಷೆಗಳ ದೇಶವಾಗಿಯೇ ಉಳಿಯಬೇಕು, ಈ ದೇಶಕ್ಕೆ ಯಾವ ಭಾಷೆಯನ್ನಾಡತಕ್ಕ ಜನರು ಬಂದಾಗ್ಯೂ ಅವರನ್ನು ನಾವು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇವೆ ಎಂದೂ ಹೇಳಿದ್ದಾರೆ. ಅದೇ ಅಭಿಪ್ರಾಯವನ್ನು ನಾನೂ ಸಹ ಹೊಂದಿದವನಾಗಿದ್ದೇನೆ. ಮತ್ತು ದೇಶದಲ್ಲಿರತಕ್ಕ ಸಾಮಾನ್ಯ ಜನರ ಅಭಿಪ್ರಾಯವೂ ಸಹ ಇದೇ ಆಗಿದೆ. ಆದರೆ ಶ್ರೀಮಾನ್ ಹನುಮಂತಯ್ಯನವರು ಮಂಗಳೂರಿನಲ್ಲಿ ಮಾತನಾಡುವಾಗ ಆಯಾ ಸನ್ನಿವೇಶಕ್ಕೆ ಹೊಂದಿಕೆಯಾಗುವ ಹಾಗೆ ಮಾತನಾಡಿದ ಹಾಗೆ ತೋರುತ್ತದೆ. ಅಲ್ಲಿಯ ಜನರ ಪ್ರೋತ್ಸಾಹದಿಂದ ಉತ್ಸಾಹಪೂರಿತವಾದ ಮತ್ತು ಆವೇಶಪೂರಿತವಾದ ಭಾಷಣವನ್ನು ಅಲ್ಲಿ ಅಪ್ಪಣೆ ಕೊಡಿಸಿದ್ದಾರೆಂದು ಭಾಸವಾಗುತ್ತದೆ. ಮಾನ್ಯ ಶಿವನಂಜೇಗೌಡರೂ ಸಹ ಇದೇ ರೀತಿ ಅಭಿಪ್ರಾಯಪಟ್ಟಿದ್ದಾರೆ. ಆತುರ ಪಡದೆ ತಾಳ್ಮೆಯಿಂದ ಈ ಸಮಸ್ಯೆಯನ್ನು ಪರಿಶೀಲಿಸಿ ತೀರ್ಮಾನಿಸುವುದು ಸೂಕ್ತವೆಂಬ ಶ್ರೀ ಹನುಮಂತಯ್ಯನವರ ಅಭಿಪ್ರಾಯ ಶ್ಲಾಘನೀಯವಾಗಿದೆ.

ಮತ್ತೊಂದು ವಿಚಾರವನ್ನು ಪ್ರಸ್ತಾಪ ಮಾಡಲು ಆಶಿಸುತ್ತೇನೆ. ಶ್ರೀ ಪಿ. ಆರ್. ರಾಮಯ್ಯನವರು ಬಹಳ ಅನುಭವಿಗಳೂ ಮತ್ತು ದೇಶದಲ್ಲಿರುವ ಜನರ ಅಭಿಪ್ರಾಯಗಳನ್ನು ರೂಢಿಸತಕ್ಕ, ಮಾರ್ಪಡಿಸತಕ್ಕ ಮತ್ತು ರೂಪುಗೊಳಿಸತಕ್ಕ ಸಾಧನವಾದ ಪತ್ರಿಕೆಯ ಸಂಸ್ಥಾಪಕರೂ ಮತ್ತು ಮಾಲೀಕರೂ ಆಗಿದ್ದಾರೆ. ಇಂಥವರು ಮಾತನಾಡುವಾಗ ಒಂದು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಅದೇನೆಂದರೆ "ಮೈಸೂರು

ಈಗ ಇರುವ ಹಾಗೆಯೇ ಇರಬೇಕು ಎಂಬುದಾಗಿ ಕೆಲವರು ಹೇಳಿದರು. ಅವರು ದೇಶದ್ರೋಹಿಗಳು" ಎಂದು.

ಶ್ರೀ ಪಿ. ಆರ್. ರಾಮಯ್ಯ (ಬಸವನಗುಡಿ).—ನಾನು ಹಾಗೆ 'ದೇಶದ್ರೋಹಿಗಳು' ಎಂದು ಹೇಳಲಿಲ್ಲ.

2-30 P.M.

ಶ್ರೀ ಕೆ. ಪುಟ್ಟಸ್ವಾಮಿ.—ಅದು ನನಗೆ ಚೆನ್ನಾಗಿ ಜ್ಞಾಪಕದಲ್ಲಿದೆ. ಇಲ್ಲಿ ಬರೆದುಕೊಂಡಿರುವುದರಲ್ಲೂ ಅದಿದೆ. ದೇಶದ್ರೋಹಿ ಎಂದು ಅವರು ಹೇಳಿದರು. ಒಂದುವೇಳೆ ದೇಶದ್ರೋಹಿ ಎಂಬುದಕ್ಕೆ ಕಾನೂನಿನ ಕಡತದಲ್ಲಿರುವ ಸೂತ್ರಕ್ಕಿಂತ ಬೇರೆ ಅರ್ಥವನ್ನು ಅವರು ಇಟ್ಟುಕೊಂಡಿದ್ದರೂ ಇರಬಹುದು. ಆದರೆ ನಾವು ಅರ್ಥಮಾಡಿಕೊಂಡಿರುವಂತೆ ನೋಡುವುದಾದರೆ, ಮುಖ್ಯವಾಗಿ ಇಂಥ ಕಠಿಣವಾದ ಪದಗಳನ್ನು ಜ್ಞಾನವೃದ್ಧರಾದ, ವಯೋವೃದ್ಧರಾದ ರಾಮಯ್ಯನವರಂಥವರು ಉಪಯೋಗಿಸದಿರುವುದು ಮೇಲು ಎಂದು ಮಾತ್ರ ಹೇಳುತ್ತೇನೆ.

ಇನ್ನು ಈ ಮಾನ್ಯ ಸಭೆಯಲ್ಲಿ ಮಾತನಾಡಿದ ಇಬ್ಬರು ಸದಸ್ಯರ ವಿಚಾರವಾಗಿ ನಾನು ಮಾತನಾಡದಿದ್ದರೆ ಕರ್ತವ್ಯಲೋಪವಾಗುತ್ತದೆಂದು ನಾನು ಭಾವಿಸುತ್ತೇನೆ. ಬಾಗೇಪಲ್ಲಿ ಸದಸ್ಯರಾದ ಶ್ರೀಮಾನ್ ನಾರಾಯಣರೆಡ್ಡಿಯವರೂ ಮತ್ತು ಚಿತ್ರದುರ್ಗದ ಸದಸ್ಯರಾದ ಶ್ರೀಮಾನ್ ಮುಲ್ಕಾ ಗೋವಿಂದರೆಡ್ಡಿಯವರೂ ಬಹಳ ವಾದಗ್ರಸ್ತ ವಿಚಾರವನ್ನೆತ್ತಿ ಮಾತನಾಡಿದ್ದಾರೆ. ಒಂದು ಮಾತಿನಲ್ಲಿ ಹೇಳುವುದಾದರೆ ನಮ್ಮ ದೇಶದಲ್ಲಿರತಕ್ಕ ತೆಲುಗು ಮಾತನಾಡತಕ್ಕ ಜನರ ಭಾವನೆಯನ್ನು ಅವರು ಎತ್ತಿ ಹೇಳಲಿಲ್ಲ ಎನ್ನುವುದರಲ್ಲಿ ಎಳ್ಳಷ್ಟೂ ಸಂಶಯವಿಲ್ಲ. ಶ್ರೀಮಾನ್ ನಾರಾಯಣರೆಡ್ಡಿಯವರು ಮೈಸೂರು ದೇಶದವರೇಕೆ ಅಡ್ಡಗೋಡೆಯ ಮೇಲೆ ನಿಂತಿದ್ದಾರೆ ಎಂದು ಹೇಳಿದರು. ಆದರೆ ಅವರು ಸ್ವಲ್ಪ ಸಮಾಧಾನದಿಂದ ಆಲೋಚನೆ ಮಾಡಿದ್ದರೆ ಮೈಸೂರು ಸರ್ಕಾರದವರಾಗಲಿ, ಮೈಸೂರು ಜನತೆಯಾಗಲಿ ಅಡ್ಡಗೋಡೆಯ ಮೇಲೆ ಕುಳಿತಿಲ್ಲವೆಂಬುದನ್ನು ಮನಗಾಣುತ್ತಿದ್ದರು. ಶ್ರೀಮಾನ್ ಎಲ್. ಸಿದ್ದಪ್ಪನವರು ಮಾತನಾಡುತ್ತಾ ಮೈಸೂರು ದೇಶದ ಜನ ಯಾವ ರೀತಿಯ ಭಾವನೆ ಹೊಂದಿರುತ್ತಾರೆಂಬುದನ್ನು ಸಂಕ್ಷೇಪವಾಗಿ ಮತ್ತು ಸಂದೇಹಕ್ಕೆ ಅವಕಾಶವಿಲ್ಲದಂತೆ ಹೇಳಿದ್ದಾರೆ. ಪಕ್ಕದಲ್ಲಿರುವವರು ತಮಿಳರಾಗಲಿ, ತೆಲುಗರಾಗಲಿ, ಕನ್ನಡಿಗರಾಗಲಿ,—ಯಾರೇ ಆಗಲಿ ಅವರೇ ಅಪೇಕ್ಷಿಸಿ ಬರುವುದಾದರೆ ಅದು ನಮ್ಮ ಆಡಳಿತ ದೃಷ್ಟಿಯಿಂದ ಅನುಕೂಲವಾಗುವುದಾದರೆ ಅದಕ್ಕೆ ನಾವು ಪ್ರತಿಭಟಿಸುವುದಿಲ್ಲ, ಅದಕ್ಕೆ ನಾವು ಆಕ್ಷೇಪಣೆ ಮಾಡುವುದಿಲ್ಲ ಎಂದು ಹೇಳಿದ್ದಾರೆ. ಶ್ರೀಮಾನ್ ಪಟ್ಟಾಭಿರಾಮಯ್ಯರವರೂ ಕೂಡ, ಮೈಸೂರು ದೇಶವನ್ನು ದೇಶದ ಆಡಳಿತಾನುಕೂಲಕ್ಕೆ ಅಡ್ಡಿಯಾಗದೆ ಎಷ್ಟು ವಿಸ್ತೀರ್ಣ ಮಾಡುವುದಕ್ಕೆ ಅವಕಾಶವಿದೆಯೋ ಅಷ್ಟನ್ನು ನೋಡಿಕೊಂಡು ಎಷ್ಟು ಭಾಗ ಸೇರಿಸುವುದಕ್ಕೆ ಅವಕಾಶವಿದೆಯೋ ಅಷ್ಟು ಭಾಗ ಸೇರಿಸಿಕೊಳ್ಳುವುದರಲ್ಲಿ ತಮ್ಮ ಅಡ್ಡಿಯಿಲ್ಲವೆಂದು ಹೇಳಿದ್ದಾರೆ. ಹೀಗಿರುವಾಗ ಎಲ್ಲಕ್ಕಿಂತ ಹೆಚ್ಚಾಗಿ ಚಿತ್ರದುರ್ಗದ ಸದಸ್ಯರಾದ ಮುಲ್ಕ ಗೋವಿಂದರೆಡ್ಡಿಯವರು ಹೇಳಿದ್ದು ಬಹಳ ಆಶ್ಚರ್ಯವಾಗಿದೆ. ಅವರು ಹೇಳಿದರು, "ತೆಲುಗರಿಗೆ, ಆಂಧ್ರರಿಗೆ ಇಂದು 'ನ್ಯಾಷನಲ್ ಹೋಮ್' ಸಿಕ್ಕಿತು" ಎಂದು. ಈ ಮಾತುಗಳು ನನಗೆ ಬಹಳ ಆಶ್ಚರ್ಯವನ್ನುಂಟುಮಾಡುತ್ತವೆ. ಇದು ಹಿಟ್ಲರ್ ಮನೋಭಾವದಂತಿದೆ. ಶ್ರೀಮಾನ್ ಮುಲ್ಕ ಗೋವಿಂದರೆಡ್ಡಿಯವರಿಗೆ ರಾಷ್ಟ್ರವೆಂದರೇನು, ದೇಶವೆಂದರೇನು ಎಂಬುದೇ ಇನ್ನೂ ಗೊತ್ತಿಲ್ಲವಲ್ಲಾ ಎಂದು ನನಗೆ ವಿಷಾದವಾಗುತ್ತದೆ. ಮುಲ್ಕ ಗೋವಿಂದರೆಡ್ಡಿಯವರೇನಾದರೂ ಆಂಧ್ರರೇ ಬೇರೆ ರಾಷ್ಟ್ರಕ್ಕೆ ಸೇರಿದವರೆಂದು ಹೇಳುವುದಾದರೆ ಅವರ ಇಂಡಿಯಾ ದೇಶದಲ್ಲಿರುವುದಕ್ಕೆ ಹಕ್ಕಿಲ್ಲವೆಂದು ನಾನು ಹೇಳುತ್ತೇನೆ ಹಾಗಿಲ್ಲದೆ, ಅವರು ತಮಗೆ ಹಕ್ಕಿದೆ, ತಮ್ಮ ಅರ್ಥದಲ್ಲಿ ಆಂಧ್ರವೇ ಒಂದು ರಾಷ್ಟ್ರ, ತಮಗೂ ಕನ್ನಡಿಗರಿಗೂ ತಮಿಳರಿಗೂ ಮತ್ತು ಬೇರೆ ಮಾತನಾಡುವವರಿಗೂ ವ್ಯತ್ಯಾಸವಿದೆಯೆಂಬ ಭಾವನೆಯನ್ನು ವ್ಯಕ್ತಪಡಿಸುವುದಾದರೆ, ಮೈಸೂರು ದೇಶದಲ್ಲಿ, ಅದರಲ್ಲೂ ಈ ಸಭೆಯಲ್ಲಿ ಅವರು ಸದಸ್ಯರಾಗಿರಲು ಅರ್ಹತೆ ಪಡೆದಿಲ್ಲವೆಂದು ನನಗೆ ಭಾಸವಾಗುತ್ತಿದೆ.

ಇನ್ನು ಬಳ್ಳಾರಿ ಪ್ರಾಂತ ಮೈಸೂರಿಗೆ ಸೇರುವುದರಲ್ಲಿ ನಮಗಂತೂ ಬಹಳ ಸಂತೋಷ. ಆಡಳಿತದ ದೃಷ್ಟಿಯಿಂದ ಅದು ನಮಗೇನೂ ಹೊರೆಯಾಗಲಾರದು, ನಮಗೆ ಅನುಕೂಲವೇ ಆಗುತ್ತಿದೆ. ಆದ್ದರಿಂದ ಶ್ರೀ ಬಿ. ವಿ. ನಾರಾಯಣರೆಡ್ಡಿಯವರು ಮತ್ತು ಶ್ರೀ ಮುಲ್ಕ ಗೋವಿಂದರೆಡ್ಡಿಯವರಂಥ ಆಂಧ್ರ ನಾಯಕರ ಹಿಂಬಾಲಿಗರಾಗಕೂಡದೆಂದು ಹೇಳಿ, ಈ ಬಳ್ಳಾರಿ ಮಸೂದೆಯನ್ನು ನಾನು ಸ್ವಾಗತಿಸುತ್ತೇನೆ.

Sri S. SRINIVASA IYENGAR (T.-Narasipur).—Mr. Speaker, I thank you very much for having kindly given me an opportunity of expressing my views about the Andhra Bill. By the introduction of this Bill it has been made very clear that the Government of India desire to form provinces on language basis alone., I make this statement because this Bill is based mostly on the awards and reports of their Lordships Justice Wanchoo and Justice Misra. While making provisions in this Bill to carve out a Province of Andhra out of the areas of Madras Province, the Government of India have done the greatest injustice in permitting the entire Taluk of Anantapur to be merged with Andhra. If the Government of India had based their entire Bill on the language they knew definitely well that Kalyandrug, Shiralkuppa and Madakasira are places where Kannadigas predominate. When the Government of India took the trouble of taking out Alur, Adoni and Rayadurga from Bellary District solely on the principle of language, there was no reason why Madakasira and Kalyandrug were not proposed to be transferred to the State of Mysore. Even though I may not agree with the principle that Provinces should be carved out solely on the principle of

(SRI S. SRINIVASA IYENGAR.)

languages, I feel that the Government of India are wedded to this principle. The Congress Working Committee two years ago had resolved that the formation of Andhra Province and that of Karnataka would be taken up simultaneously. But in this Bill what has been proposed is the formation of Andhra Province alone and an addition of small territories to the State of Mysore. Just two months ago a statement has been made by the Prime Minister of India in the House of Parliament that a High Power Commission would be set up for the purpose of carving out provinces in India. I submit that the terms of reference should be a thing that should not relate to language because the basic principle of formation of linguistic provinces has already been accepted and I propose that the Government of Mysore will urge upon the Government of India to hasten the formation of Provinces according to the accepted principle.

Now in this Bill what has been provided under the representation to the Council of State I believe has done the greatest harm to the Mysore State. The Bill has based its provisions on the provisions of the Representation of the People Act. The Bill says that the present representation of the Mysore State in the Council of States, Government basing its judgment on the population that will come into account, is 7.96 according to the 1941 Census. It is true that if the 1941 Census is taken into consideration, the population of the increased Mysore territory would be 7.96 millions and our quota in the Council of States would not be more than 6, but after all for one more seat the population will fall short to the tune of only .04 million. But under the Constitution the President has been given powers to pass orders after a period of three years from the commencement of the Constitution to amend such laws. I submit that the Government of Mysore will urge upon the Government of India to increase the number of seats in the Council of States. Secondly, we are getting five more Members to the Legislative Assembly of Mysore transferred from the Legislative Assembly of Madras. These five had participated in electing their representatives to the Madras Legislative Council from the Assembly Electoral College. The five that will sit here will have lost their right of electing one more from this Legislature to the Legislative Council of our State. Under Article 171, a shelter has been taken that the maximum number, that is, 40 has already been established in the Mysore Legislative Council and therefore the number cannot be increased. But, Sir, I learn that the Legislative Assembly of Madras had elected a person who is a resident of Bellary District and who is a sitting member in the Legislative Council of Madras; but according to this Bill this member will lose his seat according to Section 21. I submit that the Government of Mysore will represent to the Government of India that one more seat shall be provided in the Legislative Council of Mysore so that that area which is sought to be transferred to Mysore State will have a representation in the Upper House of Mysore State.

Sri L. SIDDAPPA (Channagiri).—There is an amendment by Sri Mohamed Imam.

ಶ್ರೀ ಕೆ. ಹನುಮಂತಯ್ಯ (ಮುಖ್ಯ ಮಂತ್ರಿಗಳು).—ಈಗ ಶ್ರೀ ಮಾಲ್ಕ ಗೋವಿಂದರೆಡ್ಡಿಯವರಿಗೆ ಉತ್ತರ ಹೇಳಿ.

Sri S. SRINIVASA IYENGAR.—Much more than that, the Bill seeks to take away the right of a voter. It is that provision that I oppose. That point has already been raised by Sri K. Pattabhiraman. Under section 22 (3) and (4) what the Bill seeks to do is to deprive the voter of the local authorities' constituency, the graduates' constituency and the teachers' constituency from exercising his power. That means, the Bill seeks to say that the representative now elected from Chitaldrug constituency under these categories shall be deemed to represent the voters of that

constituency sought to be transferred. How can any provision of law say that a person elected by somebody else will represent some other persons. That means the birth-right of exercising a vote is sought to be taken away by this Bill and I firmly oppose that, and, as Sri K. Pattabhiraman puts it rightly, I think a time will come when a provision may be passed wherein any person may be deemed to represent any constituency. I think it is opposed to the fundamental principle and the sovereignty of the people.

As regards the High Court, there is a clause in this Bill which entitles all Attorneys and Advocates now enrolled in the High Court of Madras to practise in the High Court of Mysore.

Sri K. HANUMANTHAIYA.—May I throw out a suggestion to the Hon'ble Members? These are particular provisions of the Bill that can be discussed threadbare at the appropriate moment.

Sri S. SRINIVASA IYENGAR.—I don't touch on it in detail.

Mr. SPEAKER.—Added to that, there are some amendments also.

Sri S. SRINIVASA IYENGAR.—I am speaking on the principles of the Bill. I am not drawing particular attention to any section. Why I had to mention about that is, in the last session we have passed a Bill called the Court Fees Stamp (Amendment) Bill, wherein Advocates coming from outside have to pay a prescribed fee for enrolment in the High Court of Mysore.

Sri K. HANUMANTHAIYA.—You can discuss this point when actually this clause is taken.

Sri S. SRINIVASA IYENGAR.—So far as the Bill is concerned, I feel that the provisions under Tungabhadra Projects are particularly harmful to the State of Mysore. The Tungabhadra Project is situated in the limits of Mysore and the Tungabhadra Project belongs to the Mysore State, but the management of the project is sought to be done by three powers—the Hyderabad Government the Andhra Government and the Government of Mysore. The Government of Mysore, having been made to pay certain share of the investment already made, by the provisions in this Bill, should also have the right to change the design or to take such other measures as are necessary during the course of execution. According to this Bill, that power is sought to be taken away because they define the Tungabhadra Project as a project that has been agreed upon between the Government of Madras and the Government of Hyderabad and therefore I submit that the Mysore Government should represent in such a manner as to have the desires of this House accomplished.

The area that will be coming to the State of Mysore will be the deficit area. I do not very much mind the deficit. I am highly satisfied that the people who were with us prior to 1792 are going to be with us once again. But, Sir, while doing so, we should claim all that is due to us, particularly so because, the deficit that is anticipated will not remain at thirty lakhs but will be in the order of fifty lakhs. Sir, I submit that the revenue as stated in the Bill under the statement of accounts furnished will not remain at that, because receipts under different taxes will not be the same as between the States of Mysore and the State of Madras. Taxation in Mysore State is lower, and therefore, the State will receive a lesser amount than what is anticipated, and we have to spend much more than what was used to be spent up to this day.

Speaking on this Bill, I submit that many more provisions need careful scrutiny. Provision of accommodation in jails, provision of accommodation in institutions—all these clauses, even though in principle they may be accepted, in practice it will be very hard to work out. The Government of Mysore should do their best to see that the interest of Mysore is safeguarded.

ಶ್ರೀ ಡಿ. ದೇವರಾಜ ಅರಸ್ (ಹುಣಸೂರು).—ಸ್ವಾಮಿ, ಈ ಆಂಧ್ರರಾಜ್ಯದ ಮಸೂದೆಯನ್ನು ನಾನು ಸ್ವಾಗತಿಸುತ್ತಾ ಹೊಸದಾಗಿ ನಿರ್ಮಾಣವಾಗತಕ್ಕ ಆಂಧ್ರರಾಜ್ಯಕ್ಕೆ ಎಲ್ಲ ವಿಷಯದಲ್ಲಿಯೂ ಒಳ್ಳೆಯದಾಗಲೆಂದು ಹಾರೈಸುತ್ತೇನೆ. ಈ ಸಂದರ್ಭದಲ್ಲಿ ನಮ್ಮ ಮೈಸೂರು ದೇಶಕ್ಕೆ ಬಳ್ಳಾರಿ ಡಿಸ್ಟ್ರಿಕ್ಟಿನ ಏಳು ತಾಲ್ಲೂಕುಗಳು ಬಂದಿರತಕ್ಕದ್ದು ಒಂದು ವಿಶೇಷ. ಇದರಲ್ಲಿ ಒಂದು ಔಚಿತ್ಯವೇನಿವಯೆಂದರೆ, ಇತರ ದೇಶಗಳ ಹಾಗೆ ನಮಗೆ ಆ ಪ್ರದೇಶ ಬೇಕೆಂದು ನಾವು ಕೇಳದೆ, ಯಾವ ಸತ್ಯಾಗ್ರಹವನ್ನೂ ಹೂಡದೆ, ಯಾವ ರೀತಿಯ ಚಳುವಳಿಯನ್ನೂ ಮಾಡದೆ ತಾನಾಗಿಯೇ ಆ ಪ್ರಾಂತ ನಮ್ಮ ಮೈಸೂರು ಸಂಸ್ಥಾನಕ್ಕೆ ಸೇರಿಸಲ್ಪಟ್ಟು ಆಮೇಲೆ ರಾಜ್ಯಾಂಗದ ಮೂರನೆಯ ಆರ್ಟಿಕಲ್ಲಿನ ಪ್ರಕಾರ ನಮ್ಮನ್ನು ಕೇಳಬೇಕೆಂದು ನಮ್ಮ ಮುಂದೆ ಈ ಮಸೂದೆಯನ್ನು ತಂದಿದ್ದಾರೆ. ಏನೇ ಆಗಲಿ, ಯಾವ ವಿಧದಲ್ಲಿಯೇ ಬಂದಿರಲಿ, ನಮ್ಮ ಹಿರಿಯರು ಹೇಳುವ ಹಾಗೆ, ತಾನಾಗಿಯೇ ಬಂದ ಭಾಗ್ಯಲಕ್ಷ್ಮಿಯನ್ನು ಬೇಡ ಎನ್ನಬೇಡ ಎಂಬ ಹಾಗೆ, ನಾಗರಿಕರಾದ ನಮ್ಮಂಥವರ ಲಕ್ಷಣ ತಾನಾಗಿಯೇ ಬಂದವರನ್ನು ಸ್ವಾಗತಿಸುವುದು.

ಸ್ವಾಮಿ, ಆಂಧ್ರ ಪ್ರಾಂತ ನಿರ್ಮಾಣ ಮಾಡುವಾಗ ಬಳ್ಳಾರಿಯ ಕೆಲವು ಪ್ರಾಂತಗಳನ್ನು ನಮ್ಮ ಮೈಸೂರು ದೇಶಕ್ಕೆ ಸೇರಿಸುವಾಗ ಮುಖ್ಯವಾಗಿ ಒಂದು ಆಧಾರವೇನಿದೆಯೆಂದರೆ ಭಾಷೆಯ ಮೇಲೆ ಪ್ರಾಂತಗಳನ್ನು ವಿಂಗಡಣೆ ಮಾಡಿರುವುದು. ಮಿಶ್ರಾವರದಿಯ ಪ್ರಕಾರ ಅವರು ಆರ್ಥಿಕ ದೃಷ್ಟಿ, ಆಡಳಿತ ದೃಷ್ಟಿ, ಸೆಕ್ಷನಲ್ ಅಂಕಿ ಅಂಶಗಳು ಎಲ್ಲವನ್ನೂ ತೆಗೆದುಕೊಂಡು ಪ್ರಸ್ತಾಪ ಮಾಡಿ, ಅವರಲ್ಲಿ ಒಂದು ವಿಚಾರವನ್ನು ಒತ್ತಿ ಹೇಳಿದ್ದಾರೆ. ಬಳ್ಳಾರಿ ಪ್ರಾಂತದಲ್ಲಿ ಕನ್ನಡ ಭಾಷೆಯನ್ನು ಮಾತನಾಡುವ ಜನರು ಹೆಚ್ಚಾಗಿರುವ ಭಾಗವನ್ನು ಮೈಸೂರು ದೇಶಕ್ಕೆ ಸೇರಿಸಬೇಕೆಂದು ಹೇಳಿದ್ದಾರೆ. ಮಿಕ್ಕವು ಅಷ್ಟು ಮುಖ್ಯ ಪ್ರಶ್ನೆಗಳಲ್ಲವೆಂಬುದನ್ನು ಪ್ರಸ್ತಾಪ ಮಾಡಿದ್ದಾರೆ. ಮೈಸೂರಿಗೆ ಸೇರುವ ಬಳ್ಳಾರಿ ಪ್ರಾಂತವನ್ನು ಸ್ವಾಗತಿಸುವಾಗ ಭಾಷಾವಾರು ಆಧಾರದ ಮೇಲೆ ವಿಂಗಡಣೆಯನ್ನು ಸ್ವಾಗತಿಸಿದ ಹಾಗೆ ಭಾಸವಾಗುತ್ತದೆ. ಈ ವಿಚಾರದಲ್ಲಿ ಹಿಂದರೆ ಭಾಷೆಯ ಆಧಾರದ ಮೇಲೆ ವಿಂಗಡಣೆಯಾಗಬೇಕೇ ಇಲ್ಲವೇ ಎಂಬ ವಿಷಯದಲ್ಲಿ ಹೆಚ್ಚು ಚರ್ಚೆ ಮಾಡುವ ಅವಶ್ಯಕತೆಯಿಲ್ಲ. ಏಕೆಂದರೆ, ಇದು ಸರಿಯೋ ಅಲ್ಲವೋ, ಇಂಡಿಯಾ ಸರ್ಕಾರದವರು ಭಾಷೆಯ ಆಧಾರದ ಮೇಲೆ ಪ್ರಾಂತವನ್ನು ವಿಂಗಡಣೆ ಮಾಡಬೇಕೆಂದು ಒಂದಲ್ಲ ಒಂದು ವಿಧದಲ್ಲಿ ಒಪ್ಪಿಕೊಂಡೇ ಈ ಆಂಧ್ರ ಪ್ರಾಂತವನ್ನು ನಿರ್ಮಾಣ ಮಾಡಿದ್ದಾರೆ. ಇಂಡಿಯಾ ಸರ್ಕಾರದಲ್ಲಿ ಈ ತತ್ವವನ್ನು ಒಪ್ಪಿದ್ದರೂ ಕೂಡ ನಮ್ಮ ಮೈಸೂರು ದೇಶದಲ್ಲಿ ಭಾಷೆಯ ಆಧಾರದ ಮೇಲೆ ಹೊಸದಾಗಿ ಪ್ರದೇಶಗಳು ನಮ್ಮ ಮೈಸೂರು ರಾಜ್ಯಕ್ಕೆ ಸೇರುವ ವಿಷಯದಲ್ಲಿ ಮೈಸೂರಿನವರ ಅಭಿಪ್ರಾಯವೇನಾಗಿದೆ ಎನ್ನುವುದನ್ನು ಈ ಸಂದರ್ಭದಲ್ಲಿ ವ್ಯಕ್ತಪಡಿಸುವುದು ಸೂಕ್ತವೆಂದು ನಾನು ಅಭಿಪ್ರಾಯಪಡುತ್ತೇನೆ. ತಾತ್ವಿಕವಾಗಿ ನೋಡುವುದಾದರೆ, ದೇಶವನ್ನು ಬರೀ ಭಾಷೆಯ ಆಧಾರದ ಮೇಲೆ ವಿಂಗಡಣೆ ಮಾಡುವುದು ನನಗಂತೂ ಸರಿಯಾದ ತತ್ವವಲ್ಲವೆಂದು ಕಾಣುತ್ತದೆ. ಆದರೆ ವ್ಯವಹಾರ ದೃಷ್ಟಿಯಿಂದ ಕೆಲವುವೇಳೆ, ಈಗ ಆಂಧ್ರ ಪ್ರಾಂತವನ್ನು ನಿರ್ಮಾಣ ಮಾಡಿದ ಹಾಗೆ ಮಾಡಬೇಕಾದ ಸಂದರ್ಭ ಇಂಡಿಯಾ ಸರ್ಕಾರಕ್ಕೆ ಬಂದದ್ದರಿಂದ ಈ ಪ್ರಾಂತವನ್ನು ಮಾಡಬೇಕಾಗುತ್ತದೆ ಮತ್ತು ಮಾಡಿದ್ದಾರೆ. ಈ ಪ್ರಾಂತವನ್ನು ಮಾಡೋಣ, ಕಾಲಕ್ರಮದಲ್ಲಿ ಇದು ಯಾವ ರೀತಿ ಕೆಲಸಮಾಡುತ್ತದೆಂಬ ವಿಷಯದಲ್ಲಿ ಅನುಭವ ಪಡೆದು, ಭಾಷಾವಾರು ಪ್ರಾಂತ ಮಾಡಬೇಕಾದರೆ, ಕರ್ಣಾಟಕ ಪ್ರಾಂತ ಮಾಡಬೇಕಾದರೆ, ಈ ಅನುಭವವನ್ನು ಮನಸ್ಸಿನಲ್ಲಿಟ್ಟುಕೊಂಡು, ಆಮೇಲೆ ಯೋಚನೆಮಾಡೋಣ ಎಂದು ಹೇಳಿದ್ದಾರೆ. ಆದುದರಿಂದ ನಾವು ಈಗ ಬಳ್ಳಾರಿ ಪ್ರಾಂತ ನಮಗೇ ಸೇರುವುದನ್ನು ಸ್ವಾಗತಿಸಿದ ಮಾತ್ರಕ್ಕೇ ಮೈಸೂರು ದೇಶದವರೆಲ್ಲರೂ ಭಾಷೆಯ ಆಧಾರದ ಮೇಲೆ ಕರ್ಣಾಟಕ ಪ್ರಾಂತ ನಿರ್ಮಾಣವಾಗಬೇಕೆಂದು ಒಪ್ಪುತ್ತಾರೆ, ಅದರಿಂದ ಸ್ವಾಗತಿಸುತ್ತಾರೆಂದು ಹೇಳುವುದಕ್ಕೆ ಸಾಧ್ಯವಿಲ್ಲ. ಇದಕ್ಕೆ ಮುಖ್ಯ ಕಾರಣವೇನೆಂದರೆ ಭಾಷೆಯ ಆಧಾರದ ಮೇಲೆ ಪ್ರಾಂತವಾಗಬೇಕೇ ಬೇಡವೇ ಎನ್ನುವ ದೊಡ್ಡ ಚರ್ಚೆ, ಗೊಂದಲ ಜನಸಾಮಾನ್ಯರಿಗೆ ಸಂಬಂಧಪಟ್ಟದ್ದಾಗಿಲ್ಲ. ಉದಾಹರಣೆಗೆ ಕಂಟ್ರೋಲ್ ವಿಚಾರ ತೆಗೆದುಕೊಳ್ಳೋಣ. ಅದು ಇರಬೇಕೇ ಹೋಗಬೇಕೇ ಎಂಬುದು ಎಲ್ಲರಿಗೂ ಸಂಬಂಧಪಟ್ಟ ಪ್ರಶ್ನೆ. ಏಕೆಂದರೆ ಅದರಿಂದ ಪ್ರತಿಯೊಬ್ಬ ಪ್ರಜೆಯ ಮೇಲೂ ಪರಿಣಾಮವಾಗುತ್ತದೆ. ಕಂಟ್ರೋಲಿನಿಂದ ಪ್ರತಿಯೊಬ್ಬರಿಗೂ ತೊಂದರೆಯಾಗಿದ್ದುದರಿಂದ, ಅದು ಹೋದಮೇಲೆ ಸಂತೋಷಪಡುತ್ತಿದ್ದಾರೆ. ಪ್ರತಿಯೊಬ್ಬರೂ ಅದರ ಪರಿಣಾಮವನ್ನನುಭವಿಸಿದ್ದಾರೆ. ಅದೇ ಭಾಷಾವಾರು ಪ್ರಾಂತ ನಿರ್ಮಾಣದ ಪ್ರಶ್ನೆಯನ್ನು ತೆಗೆದುಕೊಂಡರೆ, ಇದು ಜನಸಾಮಾನ್ಯರೆಲ್ಲರಿಗೂ ಸಂಬಂಧಪಟ್ಟದ್ದಲ್ಲವಾದಕಾರಣ ಇದರಲ್ಲಿ ಜನಸಾಮಾನ್ಯರು ಆಸಕ್ತಿ ವಹಿಸಿಲ್ಲ. ಇದರಲ್ಲಿ intelligent merchant class ಕೆಲವರಿಗೆ ಮಾತ್ರ ಆಸಕ್ತಿಯಿದ್ದ ಮಾತ್ರಕ್ಕೇ ಇಡೀ ದೇಶ ಮತ್ತು ರೈತಕಾರ್ಮಿಕ ವರ್ಗಗಳಿಗೆಲ್ಲ ಈ ಹೊತ್ತು ಭಾಷಾವಾರು ಪ್ರಾಂತ ಅಥವಾ ಕರ್ಣಾಟಕ ಪ್ರಾಂತ ಆಗದೇ ಹೋದರೆ ತಮ್ಮ ಜೀವನ ಕೆಡುತ್ತದೆ, ಆದರೆ ಉದ್ಧಾರವಾಗುತ್ತೇವೆ ಎಂದು ಇವರಾರೂ ಭಾವಿಸಿಲ್ಲ. ಹೀಗೆಯೇ ಆರ್ಥಿಕ ದೃಷ್ಟಿಯಿಂದ ನೋಡಿದರೂ ಇದರಿಂದ ಒಳ್ಳೆಯದಾಗುತ್ತದೆಂದು ಹೇಳುವುದಕ್ಕೆ ಸಾಧ್ಯವಿಲ್ಲ. ಅನೇಕ ವರ್ಷಗಳು ಇದರಿಂದ ತೊಂದರೆಯಾಗಬಹುದು. ಏನೇ ಇರಲಿ, ನನ್ನ ಅಭಿಪ್ರಾಯದಲ್ಲಿ ಜನಸಾಮಾನ್ಯರಿಗೆ ಇದು ತೀವ್ರವಾದ ಪ್ರಶ್ನೆಯಲ್ಲ. ಆದುದರಿಂದ ಭಾಷಾವಾರು ಪ್ರಾಂತ ವಿಂಗಡಣೆಯಾಗುವುದಕ್ಕೆ ಕೆಲವು ಕಾಲ ನಿಧಾನವಾಗಿ, ಈ ಪ್ರಶ್ನೆಯನ್ನು ಬಿಡಿಸುವುದಕ್ಕೆ ಸಾವಕಾಶವುಂಟುಮಾಡಿಕೊಳ್ಳಬಹುದೆಂದು ಹೇಳಬಹುದು.

ಈ ಮಸೂದೆಯನ್ನು ಮಾನ್ಯ ಮುಖ್ಯ ಮಂತ್ರಿಗಳು ಮಂಡಿಸುವ ಕಾಲದಲ್ಲಿ ಬರಿಯ ಭಾಷೆಯ ಆಧಾರದ ಮೇಲೆ ರಾಜ್ಯವಿಂಗಡಣೆ ಮಾಡುವುದಕ್ಕೆ ಬದಲು ಆಡಳಿತ ಅನುಕೂಲತೆಯ ಆಧಾರದ ಮೇಲೆ ಮಾಡಬೇಕೆಂದು ಅಪ್ಪಣೆ ಕೊಡಿಸಿದರು. ಈಗಿನ ಮೈಸೂರಿನ ಆರ್ಥಿಕ ಸ್ಥಿತಿಗತಿ ಹೆಚ್ಚಾಗಿ ಕೆಡದಿರುವ ಹಾಗೆ ಪಕ್ಕದ ಪ್ರಾಂತ ಇಲ್ಲಿಗೆ ಸೇರುವುದಕ್ಕೆ ಅಪೇಕ್ಷೆಪಟ್ಟರು. ಆಯಾ ಸಂದರ್ಭ ಬಂದಾಗ ಅದರ ಸಾಧಕಬಾಧಕಗಳನ್ನು ಯೋಚನೆ ಮಾಡಬಹುದೇ ಹೊರತು ಈಗ ಭಾಷಾವಾರು ಆಧಾರದ ಮೇಲೆ ಪ್ರಾಂತ ನಿರ್ಮಾಣ ಮಾಡಬೇಕೆಂದು ಒತ್ತಾಯ ಮಾಡುವ ಸಂದರ್ಭ ಒದಗಿಲ್ಲ. ಈ ಸಂದರ್ಭದಲ್ಲಿ ಮಾತನಾಡುತ್ತಾ ಶ್ರೀ ಕೆ. ಪಟ್ಟಾಭಿರಾಮ್‌ರವರು ಕೆಲವು ಗಹನವಾದ ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಈಗಾಗಲೇ ಇಂಡಿಯಾ ಸರ್ಕಾರದವರು ಒಂದು ಹೈ ಪವರ್ ಕಮಿಷನ್ ಎಂದು ಮಾಡಿ ಇಡೀ ಇಂಡಿಯಾ ದೇಶದಲ್ಲಿ ಎಲ್ಲಾ ಪ್ರಾಂತಗಳ ಗಡಿಯನ್ನೂ

ಪುನರ್ವಿಮರ್ಶೆ ಮಾಡಿ ಚಿಕ್ಕ ಚಿಕ್ಕ ಸಂಸ್ಥಾನಗಳನ್ನು ದೊಡ್ಡದು ಮಾಡಬೇಕೆ, ದೊಡ್ಡ ದೊಡ್ಡವನ್ನು ಸಣ್ಣದು ಮಾಡಬೇಕೆ ಮುಂತಾದ ಪ್ರಶ್ನೆಗಳನ್ನು ಆ ಕಮಿಷನ್ನಿಗೆ ಒಪ್ಪಿಸಿ, ಆ ಕಮಿಷನ್ ವರದಿ ಮಾಡಬೇಕು, ಆ ವರದಿಯ ಆಧಾರದ ಮೇಲೆ ಸಂಸ್ಥಾನಗಳನ್ನು ಪುನರ್ವಿಂಗಡಣೆ ಮಾಡಬೇಕೆಂಬ ಅಭಿಪ್ರಾಯವಿದೆ ಎಂದು ಮೊನ್ನೆ ತಾನೇ ಮೇಲ್ಮನೆಯಾದ ವಿಧಾನಪರಿಷತ್ತಿನಲ್ಲಿ ಸರ್ಕಾರದವರು ಹೇಳಿದರೆಂದು ಕೇಳಿದ್ದೇನೆ. ಈ ರೀತಿಯಾಗಿರುವುದರಿಂದ ನಾವು ಬರೀ ಭಾಷೆಯ ಆಧಾರವನ್ನಿಟ್ಟುಕೊಂಡು ದೇಶವನ್ನೆಲ್ಲಾ ವಿಭಜನೆ ಮಾಡಬೇಕೆಂಬುದು ಸೂಕ್ತವಲ್ಲ. ಆ ಕಮಿಷನ್‌ನವರು ಏನು ಸಲಹೆ ಮಾಡುತ್ತಾರೆಯೋ ಆ ಆಧಾರದ ಮೇಲೆ ನಾವು ಪರಿಶೀಲನೆ ಮಾಡಬಹುದೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

Sri M. PALANIYAPPAN (Ulsoor).—Mr. Speaker, Sir, I really feel proud to welcome the Andhra Bill that is before us, for the reason that Bellary has come to us during the period when I have the honour of being a Member of this august House. Whether a province should be divided on linguistic basis or not seems to be the main thing upon which discussion is going on on this Andhra Bill. Some of my friends expressed that the division of a State on linguistic basis is detrimental and dangerous to the safety of the nation. Some others also expressed that a Boundary Commission should be appointed to go into the question in detail and see how best these territories can be divided. But my opinion is, India after the advent of the British has been divided into various classes, creeds and communities. This has created a sort of bitterness among the people; the people have developed an attitude of hatred towards their own brethren.

3 P.M.

This has created a sort of bitterness among the people and the people have developed an attitude of hatred between their own brethren. Now after independence, we feel that India is one single nation under one single administration. These provinces, in my opinion, are only to help to provide better administration and safety to the people. The Britishers have divided this country into various provinces with a view to enable them to rule the country peacefully and without giving any scope for the people to rise against them. The times have changed. We have won our independence under the able guidance of the Father of the Nation and we, the true citizens of this soil, should just rise up to the occasion and see that we eradicate all these evils from this land. I would like to ask some of our friends who have just expressed a fear on the division of this country on linguistic basis. How are we going to solve the problem of eradicating this caste, community, creed or colour system? If we are not going to find a solution, where are we to stand? We are just speaking of secular State in India and unless we make an earnest attempt to start from here, when are we going to be a secular State? It is already 4½ years since we have got our independence, but still we have not yet made any earnest attempt to just wipe out these differences from the country. In my opinion, I feel that language is the only thing which would help us to solve this problem, because this language helps us to forget the caste, creed, colour or community. Supposing a member speaks in Kannada, we feel that we are all Kannadigas and we forget ourselves for a moment whether he is an untouchable or a Mudaliar or whether he is a Brahmin or whether he is a Non-Brahmin.

An Hon'ble MEMBER.—Whether one is a Chettiar!

Sri M. PALANIYAPPAN.—I thank the Hon'ble Member, Sir. So in these circumstances, we should not think of just dividing these provinces so that there may be no occasion for differences among people, from man to man. We should not think that a Kannadiga is entirely different from Andhra or Tamilian or a Mahratta, because each one has to help in the administration of the Province whether it is a Kannadiga Province or an Andhra Province or a Tamil Province. They will help to administer their own country in a proper manner for, as Sri Pattabhiraman put it, language is not the end of all. No doubt, language will help to a certain extent to just eradicate this evil and

(SRI M. PALANIYAPPAN.)

again in the long run this would help us in the safety of the nation.

Now, coming to the point of appointing a Boundary Commission, with due reverence to Sri Potti Sriramulu who has sacrificed his life for the case of Andhra State, I feel that the appointment of this Boundary Commission is unnecessary. I therefore suggest that the Boundary Commission need not be appointed. With these few remarks, I conclude my speech.

ಶ್ರೀ ಎ. ವಿ. ನರಸಿಂಹರೆಡ್ಡಿ (ಬೆಂಗಳೂರು ದಕ್ಷಿಣ).—ಮಾನ್ಯ ಸಭಾಪತಿಗಳೇ, ಮೈಸೂರು ಸರ್ಕಾರದವರು ಈಗ ನಮ್ಮ ಶಾಸನ ಸಭೆಯ ಮುಂದೆ ಮಂಡಿಸಿರುವ 1953ನೆಯ ಇಸವಿ ಆಂಧ್ರರಾಜ್ಯ ಮಸೂದಾ ಕಾನೂನನ್ನು ನಾನು ಸ್ವಾಗತಿಸುತ್ತ ನನ್ನ ಕೆಲವು ಅಭಿಪ್ರಾಯಗಳನ್ನು ತಿಳಿಸಲಿಚ್ಛಿಸುತ್ತೇನೆ.

ಸ್ವಾಮಿ, ನಾವೀಗ ಇತಿಹಾಸದ ಒಂದು ಪೂರ್ವಕಾಲದಲ್ಲಿದ್ದೇವೆ. ಅನೇಕ ಮಹಾಪುರುಷರ ಜೀವನದ ಆದರ್ಶಗಳನ್ನು ನಾವು ಚರಿತ್ರೆಯಲ್ಲಿ ಓದಿದ್ದೇವೆ; ಇತಿಹಾಸಗಳಿಂದಲೂ ತಿಳಿದುಕೊಂಡಿದ್ದೇವೆ. ಈಗ ನಾವು ಗಾಂಧೀಯುಗವನ್ನು ಪ್ರಾರಂಭ ಮಾಡಿದ್ದೇವೆ. ಆ ಮಹಾತ್ಮ ಗಾಂಧಿಯವರು ಅವರ ಒಂದು ಜೀವನವನ್ನೂ ಅವರ ಜೀವನದ ಪ್ರತಿಯೊಂದು ಕರ್ತವ್ಯವನ್ನೂ ಮತ್ತು ಅವರ ಜೀವನರಂಗದಲ್ಲಿ ಅವರ ಪ್ರತಿಯೊಂದು ವಾದವನ್ನೂ ದೀನದಲಿತರ ಏಳಿಗೆಗಾಗಿ ಮುಡುಪಾಗಿಟ್ಟಿದ್ದರು. ಅಂಥ ಗಾಂಧಿಯವರೇ ಭಾರತದಲ್ಲಿ ಹಾಗೆ ದೀನದಲಿತರ ಏಳಿಗೆಯಾಗಬೇಕಾಗಿದ್ದರೆ ಚಿಕ್ಕ ಚಿಕ್ಕ ಆಡಳಿತದ ಪ್ರಾಂತಗಳಿರಬೇಕೆಂದು ಅವರೊಂದು ಸೂಚನೆಯನ್ನು ಪದೇ ಪದೇ ಕೊಡುತ್ತಲೇ ಇದ್ದರು. ಈಗ ಅವರ ಅಂಥ ಜೀವನದ ಸೂತ್ರವನ್ನು ಸಾಧಿಸಬೇಕಾಗಿದ್ದರೆ ಪ್ರಭಾವಯುತವಾದ ಆಡಳಿತ ಭಾಗಗಳನ್ನು ವಿಂಗಡಿಸುವ ಅಂಶವನ್ನು ಹಿನ್ನೆಲೆಯಾಗಿಟ್ಟುಕೊಂಡು ನಮ್ಮ ಅಭಿಪ್ರಾಯಗಳನ್ನು ಹೇಳತಕ್ಕದ್ದು ವಾಸ್ತವವಾದ್ದು ಮತ್ತು ಸರಿಯಾದ್ದು ಎಂದು ನಾನು ಭಾವಿಸುತ್ತೇನೆ. ಈಗ ಆಂಧ್ರರಾಜ್ಯ ಸ್ಥಾಪನೆಯಾಗುವುದಾದರೂ ಕೂಡ ಇಡೀ ಭಾರತದಲ್ಲೇ ಅತ್ಯಂತ ಜನಬಾಹುಳ್ಯದಲ್ಲಿ ಮತ್ತು ಭೂಭಾಗ ಬಾಹುಳ್ಯದಲ್ಲಿ ಎರಡನೆಯದಾದ ಪ್ರಾಂತದ ಜನರಿಗೆ ಸರಿಯಾದ ಆಡಳಿತ ವ್ಯವಸ್ಥೆಯನ್ನು ಒದಗಿಸಲಾರದೆ ಹೋದುದರಿಂದ ಈಗ ಈ ಪ್ರಾಂತರಚನೆಯಾಗಬೇಕಾಯಿತು ಎನ್ನುವುದನ್ನು ಯಾರೂ ಮರೆಯಬಾರದು. ಈ ದಿವಸ ನನ್ನ ಅನೇಕ ಮಿತ್ರರು ಹೇಳಬಹುದು, "ಹೀಗೆ ಒಂದು ಆಂಧ್ರಪ್ರಾಂತ ರಚನೆಯಾಗುತ್ತಿರುವ ಸನ್ನಿವೇಶದಲ್ಲಿ ಒಂದು ಭಾಷಾವಾರು ಪ್ರಾಂತ ರಚನೆಯಾಗುವುದಕ್ಕೆ ಅವಕಾಶ ಕೊಟ್ಟ ಹಾಗೇ ಆಯಿತು; ಮತ್ತು ಭಾಷಾವಾರು ಪ್ರಾಂತದ ತತ್ವಕ್ಕೆ ಒಪ್ಪಿಕೊಂಡಹಾಗೇ ಆಯಿತು" ಎಂದು. ನನ್ನ ಅಭಿಪ್ರಾಯದಲ್ಲಿ ಇದು ಸರಿಯೆಂದು ಖಂಡಿತವಾಗಿಯೂ ನಾನು ಭಾವಿಸುವುದಿಲ್ಲ. ಮೊನ್ನೆ ತಾನೆ ಹೈದರಾಬಾದಿನಲ್ಲಿ ನಡೆದ ಎ.ಐ.ಸಿ.ಸಿ. ಅಧಿವೇಶನದಲ್ಲಿ ಈ ರೀತಿಯ ಪ್ರಾಂತ ರಚನೆಗಳ ಬಗ್ಗೆ ಕಾಂಗ್ರೆಸ್ಸು ತನ್ನ ನಿಲುವನ್ನು ಮತ್ತು ತನ್ನ ತತ್ವವೇನಿರುತ್ತದೆಯೆಂಬುದನ್ನು ವಿವರಿಸಿರತಕ್ಕ ನಿರ್ಣಯವನ್ನು ರೂಪಿಸಿರುವ ಕಡೆಗೆ ಈ ಸಭೆಯ ಗಮನವನ್ನು ಸೆಳೆಯಲಿಚ್ಛಿಸುತ್ತೇನೆ. ಈ ದಿವಸ ತೆಲುಗು ಮಾತನಾಡತಕ್ಕಂಥ ಜನರಿರುವ ಎಲ್ಲಾ ಭೂಭಾಗವನ್ನೂ ಆಂಧ್ರಕ್ಕೆ ಸೇರಿಸಿರುವುದಿಲ್ಲವೆಂಬ ಅಂಶವನ್ನು ತಾವೆಲ್ಲರೂ ಗಮನದಲ್ಲಿಟ್ಟುಕೊಳ್ಳಬೇಕಾಗಿದೆ. ಇಡೀ ಮದ್ರಾಸ್ ಪ್ರಾಂತ ಬಹಳ ವಿಶಾಲವಾದುದಾಗಿದ್ದು, ಅನೇಕ ಜಿಲ್ಲೆಗಳಿಗೆ ಸೇರಿದ್ದಂಥ ದೀನದಲಿತ ಜನಗಳ ಅಭಿವೃದ್ಧಿಯನ್ನು ಸಾಧಿಸುವುದಕ್ಕೆ ಒಂದು ಅವಕಾಶವಿಲ್ಲದೆ ಹೋದುದರಿಂದ ಮತ್ತು ಅಂಥ ಜನಗಳು ಅವರ ಅಭಿವೃದ್ಧಿಗೆ ಮತ್ತು ಏಳಿಗೆಗೆ ಸಹಕಾರಿಯಾಗುವಂಥ ಒಂದು ಆಡಳಿತ ವ್ಯವಸ್ಥೆಯು ಬೇರೆ ಬೇರೆ ಪ್ರಾಂತಕ್ಕೆ ಅನ್ವಯಿಸುವ ರೀತ್ಯಾ ಆ ಜನಗಳಿಗೇ ಒಂದು ಅಲಾಯಿದ ಆಡಳಿತವಿರುವಂಥ ಅವಕಾಶಮಾಡಿಕೊಡಬೇಕೆಂದು ಕೇಳುತ್ತಿದ್ದುದರಿಂದ ಅವರ ಇಚ್ಛೆಯನ್ನು ಕೇಂದ್ರ ಸರ್ಕಾರದವರು ಒಪ್ಪಿ, ಅದರಲ್ಲಿ ತಿರುಳೂ ಇದೆಯೆಂದು ಅವರ ಬೇಡಿಕೆಗೆ ಮನ್ನಣೆ ಕೊಟ್ಟು, ಈಗ ಆಂಧ್ರ ರಾಜ್ಯರಚಿಸುವ ಮಸೂದೆಯನ್ನು ಮಂಡಿಸಲಿದ್ದಾರೆ. ನನ್ನ ಅನೇಕ ಮಿತ್ರರು ಹೇಳಿದರು, ಪ್ರಜಾಪ್ರಭುತ್ವವು ಯಶಸ್ವಿಯಾಗಿ ನಡೆಯಬೇಕಾಗಿದ್ದರೆ ಏಕಭಾಷಾಪ್ರಾಂತಗಳು ನಿರ್ಮಾಣವಾಗುವುದು ಅವಶ್ಯಕ ಎಂದು. ಆದರೆ ನಾನು ಅದೇ ನನ್ನ ಮಿತ್ರರಿಗೆ ಒಂದು ಪ್ರಶ್ನೆಯನ್ನು ಕೇಳಬೇಕೆಂದಿದ್ದೇನೆ. ಅತ್ಯಂತ ಉನ್ನತದ ಶಿಖರವನ್ನು ಮುಟ್ಟಿರತಕ್ಕ ಯಾವ ಆ ಪಾಶ್ಚಿಮಾತ್ಯ ರಾಷ್ಟ್ರಗಳಿವೆಯೋ ಅಂಥ ರಾಷ್ಟ್ರಗಳ ಪೈಕಿ ಒಂದಾದ ಅಮೆರಿಕಾ ಸಂಸ್ಥಾನವನ್ನು ನಾವೀಗ ಉದಾಹರಣೆಗಾಗಿ ತೆಗೆದುಕೊಂಡು ನೋಡುವುದಾದರೆ ಅಲ್ಲಿ ಸಹ ಈ ಏಕಭಾಷಾತತ್ವದ ಮೇಲೆ ಪ್ರಾಂತ ರಚನೆ ಆಗಿಲ್ಲವೆಂಬುದು ಅಲ್ಲಿಯ ಚರಿತ್ರೆಗಳಿಂದ ತಿಳಿದು ಬರುತ್ತದೆ. ಹಾಗೆ ಇದ್ದರೂ ಏಕಭಾಷಾ ರಾಜ್ಯಗಳನ್ನು ನಿರ್ಮಾಣಮಾಡದೆ ಹೋದರೆ ದೇಶದ ಮತ್ತು ಜನಗಳ ಅಭಿವೃದ್ಧಿ ಆಗುವುದಿಲ್ಲ ಮತ್ತು ಈಗ ದೇಶದ ಮುಂದಿರತಕ್ಕ ಪಂಚವಾರ್ಷಿಕ ಯೋಜನೆಗೆ ಅಡ್ಡಿ ಅಡಚಣೆಗಳು ಉಂಟಾಗುತ್ತವೆಂದು ಹೇಳಿದ್ದನ್ನು ಕೇಳಿ ನನಗೆ ಆಶ್ಚರ್ಯವಾಯಿತು. ಈ ಭಾಷಾವಾರು ಪ್ರಾಂತಗಳ ರಚನೆಯ ಬಗ್ಗೆ ಪೂರ್ವಭಾವಿಯಾಗಿಯೇ 58ನೆಯ ಎಂದರೆ ಮೊನ್ನೆ ತಾನೆ ಜರುಗಿದ ಕಾಂಗ್ರೆಸ್ ಅಧಿವೇಶನದಲ್ಲಿ ಚರ್ಚೆ ನಡೆದಾಗ್ಗೆ ಈ ರೀತಿಯ ಪ್ರಾಂತ ರಚನೆಗಳಿಂದ ಆ ಪಂಚವಾರ್ಷಿಕ ಯೋಜನೆಗೆ ಅಡ್ಡಿ ಆತಂಕಗಳುಂಟಾಗುತ್ತವೆಯೆಂಬ ಅಂಶವನ್ನು ಆಗ ಅಲ್ಲಿ ಒತ್ತಿ ಹೇಳಿದ್ದಾರೆ. ಹೀಗಿರುವಾಗ ನಿನ್ನೆ ಇಲ್ಲಿ ನಮ್ಮ ಮಿತ್ರರೊಬ್ಬರು ಅವರದೇ ಆದ ವಾದಸರಣಿಯಲ್ಲಿ, ಬೇರೆ ಒಂದು ಧಾಟಿಯಲ್ಲಿ, ಬೇರೆ ಒಂದು ದಾರಿಯಲ್ಲಿ, ಈ ಅಂಶಗಳನ್ನು ವ್ಯಕ್ತಪಡಿಸಿರುವುದನ್ನು ನೋಡಿದರೆ ನನಗೆ ಆಶ್ಚರ್ಯವಾಗುತ್ತದೆ. ಈ ಹಿಂದೆಯೂ ಈ ಭಾರತ ದೇಶ ಒಂದು ಆಡಳಿತಕ್ಕೆ ಒಳಪಟ್ಟಿರಲಿಲ್ಲವೆಂಬುದು ಇತಿಹಾಸಗಳಿಂದಲೇ ವ್ಯಕ್ತಪಡುತ್ತದೆ. ಆದರೆ ಇನ್ನು ಮುಂದೆ ಈ ರಾಜ್ಯಾಡಳಿತವು ಒಂದು ಶಾಸ್ತ್ರೀಯವಾದ ಆಧಾರದ ಮೇಲೆ ನಿಂತು ಗಾಂಧಿಯವರ ರಾಮರಾಜ್ಯವು ಸಫಲವಾಗಬೇಕಾಗಿದ್ದರೆ ಚಿಕ್ಕ ಚಿಕ್ಕ ರಾಜ್ಯಗಳನ್ನೊಳಗೊಂಡಿರುವಂತೆ ದೇಶಗಳನ್ನು ವಿಂಗಡಮಾಡುವುದು ಅವಶ್ಯಕ. ಹಾಗೆ ಮಾಡಿದ ಹೊರತು ಮುಂದಿನ ಜನಾಂಗದ ಮತ್ತು ದೇಶದ ಭವಿಷ್ಯವನ್ನು ಸಾಧಿಸದೆ ನಾವೀಸಮಯದಲ್ಲಿ ತಪ್ಪು ಹೆಜ್ಜೆಯನ್ನಿಟ್ಟು ನಡೆದಂತಾಗುತ್ತದೆ.

Sri K. PATTABHIRAMAN (Kolar).—Hear, hear !

ಶ್ರೀ ಎ. ವಿ. ನರಸಿಂಹರೆಡ್ಡಿ.—ಈ ಅಂಶವನ್ನು ತಾವು ಗಮನದಲ್ಲಿಟ್ಟುಕೊಳ್ಳಬೇಕು. ಈ ಆಂಧ್ರಪ್ರಾಂತ ಮಸೂದೆಯನ್ನು ಈ ಕಾಲದಲ್ಲಿ ಇಟ್ಟಿರುವುದಾದರೂ ಕೂಡ ಕೇವಲ ಒಂದು ಸಾಮಾನ್ಯ ಜನತೆಯ ಅರ್ಥಿಕಾಭಿವೃದ್ಧಿಯಾದೀತೆಂಬ ಒಂದು ಭವಿಷ್ಯದ ದೃಷ್ಟಿಯಿಂದ ಮಾಡಲಾಗಿದೆಯೆಂಬುದನ್ನು ತಾವು ಗಮನದಲ್ಲಿಟ್ಟುಕೊಳ್ಳಬೇಕು. ಈ ದೃಷ್ಟಿಯಿಂದ ನಾನೀಗ ಈ ಆಂಧ್ರ ಪ್ರಾಂತ ಮಸೂದೆಗೆ ನನ್ನ ಪೂರ್ಣ ಸ್ವಾಗತವನ್ನು ನೀಡುತ್ತೇನೆ.

ಶ್ರೀ ಟಿ. ಹನುಮಯ್ಯ (ಹಿರಿಯೂರು-ಅನುಸೂಚಿತ ಜಾತಿಗಳು).—ಮಾನ್ಯ ಅಧ್ಯಕ್ಷರೇ, ಈಗ ನಮ್ಮ ಮುಂದೆ ಇರತಕ್ಕ ಆಂಧ್ರರಾಜ್ಯದ ಬಿಲ್ಲನ್ನು ಸ್ವಾಗತಿಸುತ್ತಾ, ಆ ಬಳ್ಳಾರಿ ಜಿಲ್ಲೆಯ ಏಳು ತಾಲ್ಲೂಕುಗಳ ಜನರಿಗೆಲ್ಲ ಸುಸ್ವಾಗತವನ್ನು ನೀಡುತ್ತಾ ಕೆಲವು ವಿಷಯಗಳನ್ನು ಈ ಮಾನ್ಯ ಸಭೆಯ ಗಮನಕ್ಕೆ ತರಲು ಇಚ್ಛಿಸುತ್ತೇನೆ.

ಸ್ವಾಮಿ, ನಮ್ಮ ಮೈಸೂರು ದೇಶ ಈಗ ಇರುವುದಕ್ಕಿಂತಲೂ 1799ನೆಯ ಇಸವಿಯ ಹಿಂದೆ ಇದು ಒಂದು ವಿಶಾಲವಾದಂಥ ಮೈಸೂರು ದೇಶವಾಗಿತ್ತು. 1799ರಲ್ಲಿ ಯುದ್ಧವಾದ ನಂತರ ಈ ದೇಶದ ಅನೇಕ ಭಾಗಗಳು ಮೈಸೂರಿನವರ ಕೈಬಿಟ್ಟುಹೋದುವು. ಈ ವಿಷಯವು ತಮಗೆಲ್ಲರಿಗೂ ಗೊತ್ತಿರತಕ್ಕ ವಿಚಾರವೇ ಆಗಿದೆಯೆಂದು ನಾನು ಹೇಳುತ್ತೇನೆ. ಈ ಹಿಂದೆ ಮಾತನಾಡಿದ ಮಾನ್ಯ ಸದಸ್ಯರಾದ ಶ್ರೀ ಡಿ. ದೇವರಾಜ ಅರಸು ಒಂದು ವಿಷಯವನ್ನು ಹೇಳಿದ್ದಾರೆ—ಸಾಮಾನ್ಯವಾಗಿ ಭಾಷಾವಾರು ಆಧಾರದ ಮೇಲೆ ನಾವು ರಾಜ್ಯವನ್ನು ವಿಭಾಗಮಾಡಿದ್ದೇ ಆದರೆ ಅದರಿಂದ ರೈತ ವರ್ಗಕ್ಕಾಗಲಿ ಅಥವಾ ಕಾರ್ಮಿಕರ ವರ್ಗಕ್ಕಾಗಲಿ ಇದರಿಂದ ಅಷ್ಟೇನೂ ಅನುಕೂಲವಾಗುವುದಿಲ್ಲವಾದ್ದರಿಂದ ಇದೇನೂ ಬೇಕಾಗಿಲ್ಲವೆಂದು ಹೇಳಿದರು. ಆದರೆ ನಾನು ಅವರಿಗೆ ಒಂದು ಸವಾಲು ಹಾಕುತ್ತೇನೆ. ಅವರು ಈಗ ಸುಮಾರು ಒಂದು ಲಕ್ಷ ಪ್ರಜೆಗಳ ಪರವಾಗಿ ಈ ಸಭೆಗೆ ಬಂದಿರುವಂಥ ಅವರೊಬ್ಬ ಮಾನ್ಯ ಸದಸ್ಯರಾಗಿದ್ದಾರೆ. ಆದರೆ ಇವರಿಗೆ ಈ ಸಭೆಯ ಕಾರ್ಯಕಲಾಪಗಳು ಗೊತ್ತಾದ ಹಾಗೆ ಇವರ ಕ್ಷೇತ್ರದಲ್ಲಿರತಕ್ಕ ರೈತರಿಗೂ ಮತ್ತು ಕಾರ್ಮಿಕರಿಗೂ ಮತ್ತು ಜನಸಾಮಾನ್ಯರಿಗೂ ಗೊತ್ತಾಗುವುದಿಲ್ಲ. ಹೀಗೆ ಈ ವಿಚಾರಗಳೊಂದೂ ಅವರಿಗೆ ಗೊತ್ತಾಗದಿರುವಾಗ ಅವರಿಗೆ ರಾಜಕೀಯ ವಿಚಾರಗಳೂ ಸಹ ಗೊತ್ತಿರುವುದಿಲ್ಲವೆಂದೇ ಅರ್ಥವಾಗುತ್ತದೆ. ಆದುದರಿಂದ ರಾಜ್ಯವನ್ನು ಅಥವಾ ಒಂದು ದೇಶವನ್ನು ದೊಡ್ಡದು ಮಾಡುವುದಕ್ಕೇ ಆಗಲಿ ಅಥವಾ ಭಾಷಾವಾರು ಪ್ರಾಂತವನ್ನು ರಚಿಸುವುದಕ್ಕೇ ಆಗಲಿ ಅದು ಸರಿಯಾದ್ದಲ್ಲವೆಂದು ಮಾಡಿರತಕ್ಕ ವಾದಗಳನ್ನು ನಾನು ಖಂಡಿತ ಒಪ್ಪುವುದಕ್ಕಾಗುವುದಿಲ್ಲವೆಂದೇ ಹೇಳಬೇಕಾಗಿದೆ.

ಇನ್ನು ಎರಡನೆಯದಾಗಿ ಶ್ರೀ ಎ. ವಿ. ನರಸಿಂಹರೆಡ್ಡಿಯವರು ಏಕ ಭಾಷಾ ರಾಜ್ಯದ ಅಗತ್ಯವಿಲ್ಲ, ಚಿಕ್ಕ ಚಿಕ್ಕ ದೇಶವಾದರೆ ಆಡಳಿತ ದೃಷ್ಟಿಯಿಂದ ಒಳ್ಳೆಯದು ಎಂಬುದಾಗಿ ಅವರು ಮಾತನಾಡಿದ್ದಾರೆ. ಆದರೆ ರಾಜ್ಯ ದೊಡ್ಡದಾದರೆ ಅದರಿಂದ ನಮಗೇನೂ ನಷ್ಟವಿಲ್ಲ. ಹಾಗೆ ರಾಜ್ಯ ದೊಡ್ಡದಾದ ಮಾತ್ರಕ್ಕೇ ಅದರಿಂದ ನಮಗೆ ಒಂದು ನಷ್ಟವಾಗುತ್ತದೆಂದು ಮಾಡುವ ವಾದಗಳ ಅರ್ಥವೇ ನನಗೆ ಆಗುತ್ತಿಲ್ಲ. ದೇಶ ದೊಡ್ಡದಾದಂತೆಲ್ಲ ನಮ್ಮ ಮನಸ್ಸು ದೊಡ್ಡದಾಗಿ, ವಿಶಾಲವಾಗಿ ಅದರಿಂದ ಆಡಳಿತ ಕೂಡ ಚೆನ್ನಾಗಿ, ಸುವ್ಯವಸ್ಥಿತವಾಗಿ ನಡೆಯಲು ಅನುಕೂಲವಾಗುತ್ತದೆ. ಹಾಗಿಲ್ಲದೆ ದೇಶ ಎಷ್ಟು ಇಕ್ಕಟ್ಟಾಗುತ್ತದೆಯೋ ಅಷ್ಟೂ ಜನರಿಗೆ ಇಕ್ಕಟ್ಟಾಗುತ್ತದೆ ಮತ್ತು ಅದರಿಂದ ರಾಜಕೀಯ ವಾತಾವರಣವು ಸಹ ಕಷ್ಟಕ್ಕೆ ಈಡಾಗಬಹುದೆಂದು ನನ್ನ ಭಾವನೆ. ಏತಕ್ಕೆಂದರೆ ದೇಶ ಎಷ್ಟು ವಿಶಾಲವಾದರೆ ಅಷ್ಟು ಒಳ್ಳೆಯದು. ಅದರಿಂದ ನಾವೇನೂ ಇಂಡಿಯಾದ ಹೊರಗೆ ಹೋಗುವುದಿಲ್ಲ. ಒಂದೇ ಆಡಳಿತಕ್ಕೊಳಪಟ್ಟಿರುತ್ತೇವೆ. ಆದರೆ ಹಾಗೆ ದೇಶ ದೊಡ್ಡದಾಗಬೇಕೆಂದರೆ ನಾವೇನೂ ಭಾರತವನ್ನು ಬಿಟ್ಟು ಅರಬ್ಬೀ ಸಮುದ್ರ ಅಥವಾ ಬಂಗಾಳಕೊಲ್ಲಿ ಆಚೆಗೆ ಹೋಗಬೇಕೆಂದು ಹೇಳಿಲ್ಲ. ಹಾಗೆ ಹೊರಗಡೆಗೆ ಹೋಗುವುದೂ ಇಲ್ಲ. ಆದರೆ ಒಂದೇ ಭಾಷೆಯನ್ನಾಡತಕ್ಕ ಜನರು ಇಷ್ಟಪಟ್ಟು ಅವರಾಗಿಯೇ ನಮ್ಮಲ್ಲಿಗೆ ಬಂದು ಸೇರಿಕೊಳ್ಳುತ್ತೇವೆಂದರೆ ಮತ್ತು ಅವರು ಇಲ್ಲಿಗೆ ಬಂದು ನಮ್ಮೊಡನೆ ಅಣ್ಣ ತಮ್ಮಂದಿರಾಗಿ ಬಾಳುತ್ತೇವೆಂದು ಹೇಳಿದರೆ ಅಂಥವರನ್ನು ಒಂದು ಆಡಳಿತಕ್ಕೆ ಒಳಪಡಿಸುವಂತೆ ಮಾಡೋಣ, ಅದರಿಂದ ಅವರಿಗೂ ಮತ್ತು ನಮಗೂ ಒಳ್ಳೆಯದಾದೀತು ಎಂಬುದೇ ನನ್ನ ಅಭಿಮತ. ಹೇಗೆಂದರೆ ಮಾತೃ ಭಾಷೆಯನ್ನಾಡತಕ್ಕದ್ದು ಎಲ್ಲರಿಗೂ ಬಹಳ ಪ್ರೀತಿ ಪಾತ್ರವಾದದ್ದಾಗಿದೆ. ಅದು ಯಾರ ಮಾತೃ ಭಾಷೆಯೇ ಆಗಿರಲಿ, ಆಂಧ್ರ ಭಾಷೆಯೇ ಆಗಿರಲಿ, ತಮಿಳು ಭಾಷೆಯೇ ಆಗಿರಲಿ, ಆಯಾ ಮಾತೃಭಾಷೆ ಆಯಾ ಜನರಿಗೆ ಬಹಳ ಪ್ರೀತಿಯುತವಾದಂಥಾದ್ದಾಗಿರುತ್ತದೆ. ಇದಕ್ಕೆ ಒಂದು ಚಿಕ್ಕ ಉದಾಹರಣೆಯನ್ನು ಕೊಡುತ್ತೇನೆ. ನಾನು 1941ರಲ್ಲಿ ಉತ್ತರ ಇಂಡಿಯಾಕ್ಕೆ ಸಂಚಾರಣೆ ಬಗ್ಗೆ ಹೋಗಿದ್ದಾಗ ನಾನು ಸುಮಾರು ಸಾವಿರಾರು ಮೈಲಿ ಸುತ್ತಿದರೂ ಒಬ್ಬರನ್ನಾಗಲಿ ಕನ್ನಡ ಮಾತನಾಡತಕ್ಕವರನ್ನೇ ನೋಡಲು ಸಾಧ್ಯವಾಗಿರಲಿಲ್ಲ. ಅಂಥಾ ವೇಳೆಯಲ್ಲಿ ನಾನು ಡಿಲ್ಲಿ ರೈಲ್ವೆ ಸ್ಟೇಷನ್ನಿನಲ್ಲಿ ಒಂದು ದಿವಸ ರೈಲನ್ನು ಇಳಿದು ಬರತಕ್ಕ ವೇಳೆಯಲ್ಲಿ ಅಲ್ಲಿ ಒಬ್ಬರು ಕನ್ನಡ ಮಾತನಾಡುತ್ತಿದ್ದುದನ್ನು ಕಂಡು ನನಗೆ ಬಹಳ ಆನಂದವಾಯಿತು. ಆ ರೀತಿ, ನನಗೆ ಒಬ್ಬರು ಕನ್ನಡ ಮಾತನಾಡತಕ್ಕವರು ಸಿಕ್ಕಿದರಲ್ಲಾ ಎಂಬ ನನ್ನ ಸಂತೋಷಕ್ಕೆ ಪಾರವಿಲ್ಲದಂತಾಯಿತು.

ಆದರೆ, ಇತರ ದೇಶದವರು, ಇತರ ಭಾಷೆಯವರು ನಮ್ಮ ಸಂಸ್ಥಾನದಲ್ಲಿರಬಾರದೆಂದು ನಾನು ಹೇಳುವುದಿಲ್ಲ. ಆಂಧ್ರ ದೇಶದಲ್ಲೂ ಕನ್ನಡ ಮಾತನಾಡುವವರು ಇರಬಹುದು. ಅಂದಮಾತ್ರಕ್ಕೆ ಅವರಿರುವಷ್ಟು ಪ್ರದೇಶ ನಮ್ಮ ಸಂಸ್ಥಾನಕ್ಕೆ ಸೇರಬೇಕೆಂದಲ್ಲ. ಏನಿದ್ದರೂ ಆಡಳಿತ ದೃಷ್ಟಿಯಿಂದ ಒಂದು ಭಾಷೆ ಆಡುವವರು ಒಂದು ಕಡೆ ಇರಬೇಕೆಂದು ಹೇಳುವುದು ಸಾಧುವಾದದ್ದು ಅಷ್ಟೆ.

ಮುಖ್ಯ ಮಂತ್ರಿಗಳವರು ಹಿಂದೆ ಮಂಗಳೂರಿನಲ್ಲಿ ಭಾಷಣಮಾಡಿದ್ದಕ್ಕೆ ಕೆಲವರು ಆಕ್ಷೇಪಣೆಯೆತ್ತಿದ್ದಾರೆ. ನಿಜವಾಗಿಯೂ, ಕೇಂದ್ರ ಸರ್ಕಾರದವರಿಗೆ, ಅವರು ಭಾಷಾವಾರು ತತ್ವವನ್ನು ಒಪ್ಪಿಕೊಂಡಮೇಲೆ ಮತ್ತು ಅದರಂತೆ ಒಂದು ಭಾಷೆಯ ಪ್ರಾಂತವನ್ನು ಒಪ್ಪಿಕೊಂಡಮೇಲೆ ಉಳಿದ ಭಾಗಗಳನ್ನು ಭಾಷೆಗನುಗುಣವಾಗಿ ಭಾಗಮಾಡುವುದರಲ್ಲಿ 24 ಘಂಟೆಯೂ ತಡವಾಗುವುದಕ್ಕೆ ಕಾರಣವಿಲ್ಲ. ಏಕೆಂದರೆ ದೇಶದಲ್ಲಿ ನಾವೆಲ್ಲಾ ಅಣ್ಣತಮ್ಮಂದಿರು ಇರುವ ಹಾಗಿರುವಾಗ, ಒಬ್ಬರಿಗೆ ಹಂಚಿದಾಗ ಉಳಿದಿರುವವರಿಗೂ ಹಂಚುವುದಕ್ಕೆ 24 ಘಂಟೆಗಳು ಕೂಡ ಬೇಕಾಗುವದಿಲ್ಲವೆಂದು ನನ್ನ ಭಾವನೆ. ಆದ್ದರಿಂದ ಇಂಡಿಯಾ ಸರ್ಕಾರದವರು ಇದನ್ನು ಆಗಲೇ ಮಾಡಬೇಕಾಗಿತ್ತು. ಮುಖ್ಯವಾಗಿ ಈಗ, ಬಳ್ಳಾರಿ ಡಿಸ್ಟ್ರಿಕ್ಟಿನಲ್ಲಿರತಕ್ಕ ಆಡೋನಿ, ಆಲೂರು, ರಾಯದುರ್ಗ ಮುಂತಾದ

(ಶ್ರೀ ಟಿ. ಹನುಮಯ್ಯ.)

ತಾಲ್ಲೂಕುಗಳಲ್ಲಿ ಕನ್ನಡ ಮಾತನಾಡುವವರು ಜಾಸ್ತಿಯಿರುವುದರಿಂದ ಅವುಗಳನ್ನು ನಮ್ಮ ಸಂಸ್ಥಾನಕ್ಕೆ ಸೇರಿಸುವುದು ಒಳ್ಳೆಯದೆಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ (ಶಿವಮೊಗ್ಗ).—ಅಧ್ಯಕ್ಷರೇ, ಬಳ್ಳಾರಿಯ ಕಲವು ತಾಲ್ಲೂಕುಗಳು ಮೈಸೂರು ಸಂಸ್ಥಾನಕ್ಕೆ ಸೇರಿಸಿರುವುದು ಭಾಷೆಯ ದೃಷ್ಟಿಯಿಂದ. ಈ ತಾಲ್ಲೂಕುಗಳಲ್ಲಿರುವಂತೆಯೇ ಬೊಂಬಾಯಿ ಪ್ರಾಂತದಲ್ಲೂ ಕನ್ನಡ ಮಾತನಾಡುವವರಿದ್ದಾರೆ, ಮದ್ರಾಸಿನಲ್ಲೂ ಇದ್ದಾರೆ. ಆದ್ದರಿಂದ ಮೊದಲನೆಯದಲೂ ಈ ತಾಲ್ಲೂಕುಗಳನ್ನು ಯಾವ ಭಾಗಕ್ಕೆ ಸೇರಿಸಬೇಕೆಂಬುದೇ ಸಮಸ್ಯೆಯಾಗಿ ಕೊನೆಗೆ ಮೈಸೂರಿನಲ್ಲಿ ಸೇರಿಸಿದ್ದಾರೆ.

ಆ ಪ್ರಾಂತಗಳಿಗೆ ಸಂಬಂಧಪಟ್ಟಂತೆ ಅಲ್ಲಿನ ಅಡ್ಮಿನಿಸ್ಟ್ರೇಷನ್ ರಿಪೋರ್ಟಿನಲ್ಲಿ ಹೇಳಿರುವುದನ್ನು ನೋಡಿದರೆ ಈಗ ನಮಗೆ ಸೇರಿಸಿರತಕ್ಕ ಭಾಗಗಳಿಗೆ ಪೋಲೀಸಿಗಾಗಿ ಹೆಚ್ಚಿನ ಹಣ ಖರ್ಚಾಗುತ್ತದೆಯೆಂದೂ, ಹಾಗೂ ಜೈಲಿಗಾಗಿ ಖರ್ಚಾಗುತ್ತಿದೆಯೆಂದೂ ಹೇಳಿದ್ದಾರೆ. ಬಹುಶಃ ಅಲ್ಲಿನ ಜನ ಯಾವುದಾದರೂ ಕಾರಣದಿಂದ ಯಾವಾಗಲೂ ಸರ್ಕಾರದವರಿಗೆ ವಿರೋಧಾಭಿಪ್ರಾಯ ವ್ಯಕ್ತಪಡಿಸುತ್ತಿದ್ದು ಆಡಳಿತಕ್ಕೆ ಬಹಳ ಕಷ್ಟಕರವಾದ ಭಾಗವಾಗಿತ್ತೋ ಏನೋ ಎಂದು ತೋರುತ್ತದೆ. ಮೈಸೂರಿನ ಜನರಾದರೋ ಬಹಳ ಮೃದುವಾದ ಜನ. ಮುಂದೆ ಆಡಳಿತ ದೃಷ್ಟಿಯಿಂದ ಬಹಳ ಬಿಗಿಯಾಗಿ ಆಡಳಿತ ನಡೆಸಬೇಕೆಂದ ಕಾಣುತ್ತದೆ.

ಅವೇಲೆ ತುಂಗಭದ್ರಾ ಪ್ರಾಜೆಕ್ಟ್ ಬಗ್ಗೆಯೂ ನಮಗೆ ಹೆಚ್ಚಿನ ಹೊರೆ ಬೀಳಬಹುದು. ಈ ಪ್ರಾಜೆಕ್ಟಿಗೆ ಒಟ್ಟು 40 ಕೋಟಿ ರೂಪಾಯಿಗಳು ಖರ್ಚಾಗಬೇಕಾಗಿದೆ. ಸದ್ಯಕ್ಕೆ 22 ಕೋಟಿ ರೂಪಾಯಿಗಳು ಮಾತ್ರ ಖರ್ಚಾಗಿದೆ. ಇನ್ನುಳಿದ ಹಣವನ್ನು ನಮ್ಮ ಸರ್ಕಾರದವರ ಮೇಲೆಯೇ ಹೊರಿಸುತ್ತಾರೆಂದು ಕಾಣುತ್ತದೆ. ಈಗಾಗಲೇ ಮೈಸೂರಿನವರು 36 ಕೋಟಿ ರೂಪಾಯಿಗಳ ಅಂದಾಜು ಖರ್ಚಿನಲ್ಲಿ ಒಂದು ಅಭಿವೃದ್ಧಿ ಯೋಜನೆಯನ್ನು ಮಾಡಿಕೊಂಡಿದ್ದಾರೆ. ಅಂಥದರಲ್ಲಿ ಇನ್ನೂ ಈ 15 ಕೋಟಿ ರೂಪಾಯಿಗಳನ್ನೂ ಆ ಯೋಜನೆಗಾಗಿ ಖರ್ಚುಮಾಡಬೇಕಾದ ಸಂದರ್ಭ ಬರುತ್ತಿದೆ. ಇದು ಮುಂದೆ ಬರತಕ್ಕ ಸರ್ಕಾರದವರ ಮೇಲೆ ಬೀಳತಕ್ಕ ಒಂದು ಹೆಚ್ಚಿನ ಜವಾಬ್ದಾರಿಯೆಂದು ಹೇಳಬಹುದು.

ಇನ್ನು ಭಾಷಾ ದೃಷ್ಟಿಯಿಂದ ಮಾತನಾಡಬೇಕಾದರೆ ಕನ್ನಡ ಮಾತನಾಡುವವರು ಬೊಂಬಾಯಿ ನಗರದಲ್ಲೂ ಅರೆಂಟು ಲಕ್ಷವಿದ್ದಾರೆ ಅಂದ ಮಾತ್ರಕ್ಕೆ ಈ ಒಂದು ಭಾಗ ನಮಗೆ ಬರಬೇಕೆಂದು ಹೇಳುವುದಕ್ಕೆ ಖಂಡಿತ ಸಾಧ್ಯವಿಲ್ಲ. ಸುಮ್ಮನೆ ಭಾಷೆ ಭಾಷೆ ಎಂದು ಎಲ್ಲರೂ ಹೇಳಬಹುದು. ಮೈಸೂರು ಸಂಸ್ಥಾನದವರು ಕಲ್ಕತ್ತ ನಗರದಲ್ಲಿ ಬೇಕಾದಷ್ಟು ಮಂದಿ ವ್ಯಾಪಾರ ಮಾಡುತ್ತಾ ಇಲ್ಲವೇ? ಬೊಂಬಾಯಿ ನಗರದಲ್ಲಿ ಅನೇಕ ಜನ ಮೈಸೂರಿನವರು ವ್ಯಾಪಾರ ನಡೆಸುತ್ತಿಲ್ಲವೇ? ಆದ್ದರಿಂದ ಪ್ರೊವಿನ್ಷಿಯಲಿಸಂ ಬೆಳೆವಹಾಗೆ ಒಂದು ಕಡೆಯವರಿಗೆ ಇನ್ನೊಂದು ಕಡೆಯಲ್ಲಿ ಅವಕಾಶ ಸಿಕ್ಕುತ್ತದೆಯೇ ಇಲ್ಲವೇ ಎಂಬುದನ್ನು ತಾವು ಯೋಚನೆಮಾಡಬೇಕು. ಈಗಾಗಲೇ ನಾವು ನೋಡುತ್ತಿದ್ದೇವೆ. ನಮ್ಮ ವಿದ್ಯಾಭ್ಯಾಸ ಕ್ರಮದಲ್ಲಿ ಒಂದೊಂದು ಕಾಲೇಜಿನಲ್ಲಿಯೂ 600—700 ಜನರಿಗೆ ವಿದ್ಯಾಭ್ಯಾಸ ಕೊಡುತ್ತಾ ಇದ್ದೂ ಅನೇಕರಿಗೆ ಅವಕಾಶವೇ ಇಲ್ಲವಾಗಿದೆ. ಹೀಗಿರುವಲ್ಲಿ ಅನೇಕ ಪ್ರಾಂತಗಳವರನ್ನು 'ಬನ್ನಿ' 'ಬನ್ನಿ' ಎಂದು ಸೇರಿಸಿಕೊಂಡರೆ, ಮೈಸೂರು ಸಂಸ್ಥಾನದ ಇಷ್ಟು ಜನರಿಗೇ ಶಿಕ್ಷಣ ಕೊಡುವುದಕ್ಕೆ ಸಾಧ್ಯವಾಗಿಲ್ಲದಿರುವಾಗ, ಇನ್ನಷ್ಟು ಕಷ್ಟ ಬರುತ್ತದೆ. ಈಗ ನಾವು ಕೊಡುತ್ತಿರುವ ಮಟ್ಟದಲ್ಲೇ ಅವರಿಗೂ ವಿದ್ಯಾಭ್ಯಾಸ ಕೊಡಬೇಕಾದರೆ ಇನ್ನೂ ಹೆಚ್ಚಿನ ಕಾಲೇಜುಗಳನ್ನು ತೆರೆಯಬೇಕಾದ ಸಂದರ್ಭ ಬರಬಹುದು. ಈಗಾಗಲೇ ಮೈಸೂರು ಪ್ರಾಂತದಲ್ಲಿ ಶಿಕ್ಷಣ ಪಡೆದಿರುವವರು ಅನೇಕರು ಹೊರಗಿನ ಪ್ರಾಂತಗಳಿಗೆ ಹೋಗಿ ಕೆಲಸ ಮಾಡುತ್ತಿರುವಾಗ ಮುಂದೆ ಪ್ರೊವಿನ್ಷಿಯಲಿಸಂ ಬಂದರೆ ಇಲ್ಲಿನವರು ಅಲ್ಲಿಗೆ ಹೋಗಿ ಕೆಲಸ ಪಡೆಯುವುದಾಗಲಿ, ಅಲ್ಲಿನವರು ಇಲ್ಲಿ ಕೆಲಸ ಪಡೆಯುವುದಾಗಲಿ ಒಂದು ಸಮಸ್ಯೆಯಾಗಿಯೇ ಪರಿಣಮಿಸುತ್ತದೆ. ಆದ್ದರಿಂದ ಇಂದು ಮುಖ್ಯವಾಗಿ ಆಡಳಿತ ದೃಷ್ಟಿಯಿಂದು ಸುಮಾರು 150 ಮೈಲಿ ಉದ್ದ ಮತ್ತು 150 ಮೈಲಿ ಅಗಲ ವಿಸ್ತೀರ್ಣದ ಭಾಗಗಳನ್ನು ಮಾಡಿಕೊಂಡು ಒಂದು ಸಮರ್ಪಕವಾದ ರೀತಿಯಲ್ಲಿ ಆಡಳಿತ ನಡೆಸುವಂತೆ ಏರ್ಪಾಡು ಮಾಡಿಕೊಳ್ಳಬೇಕೇ ಹೊರತು ಭಾಷೆಯಿಂದು ಹೇಳಿ ಒಂದು ಭಾಷೆಯವರೆಲ್ಲಾ ಒಂದೆಡೆಯೇ ಬರಬೇಕಾಗಿಲ್ಲ. ಒಂದೇ ಭಾಷೆಯನ್ನು ಮಾತನಾಡುವವರು ಎರಡು—ಮೂರು ಸಂಸ್ಥಾನಗಳಲ್ಲಿದ್ದರೂ ಏನೂ ತೊಂದರೆಯಿಲ್ಲ. ಉದಾಹರಣೆಗೆ (U. P.) ಸಂಯುಕ್ತ ಪ್ರಾಂತವನ್ನು ನಾಲ್ಕು ಅಥವಾ ಅರು ಭಾಗಗಳನ್ನಾಗಿ ಮಾಡಿದರೆ ಆಡಳಿತಕ್ಕೆ ಅನುಕೂಲವಾಗುವುದೆಂದು ಪಂಡಿತ್ ನೆಹರೂರವರು ತಿಳಿಸಿರುವರು. ನಾವೀಗ ಇದುವರೆಗೂ ನಮ್ಮ ಈ ಸಣ್ಣ ರಾಷ್ಟ್ರವನ್ನು ಸುವ್ಯವಸ್ಥೆಯಿಂದ ನಡೆಸಿಕೊಂಡು ಬಂದಿದ್ದೇವೆ. ಈಗ ಬಳ್ಳಾರಿ ಅಳಿಯ ಬರುವವನಾಗಿದ್ದಾನೆ. ಇದರಿಂದಾಗಿ ನಮ್ಮ ಸಂಸ್ಥಾನದ ಆಡಳಿತ ಹೇಗಾಗುತ್ತದೆಂದು ಆಲೋಚನೆ ಮಾಡಿಕೊಂಡು ಸ್ವಲ್ಪ ವರ್ಷಗಳು ಕಳೆದನಂತರ ನೋಡಿ ಮಾಡಬೇಕೇ ವಿನಾ ಈಗಲೇ 6, 7 ಭಾಗಗಳವರು ನಮ್ಮ ಮೈಸೂರೊಳಗೆ ಬಂದರೆ ಇಲ್ಲಿನ ಪರಿಸ್ಥಿತಿ ಹೇಗೆ ಆಗುತ್ತದೆ ದು ಯೋಚನೆ ಮಾಡಬಹುದು. ಇದನ್ನು ಯೋಚನೆ ಮಾಡದೆ ಅರೇಳು ಅಳಿಯಂದಿರು ಬಂದರೆಂದು ಕರೆದುಕೊಂಡರೆ 'ತೀನ್‌ಬತ್ತಿ, ಚಾರ್‌ರಾಸ್ತಾ' ಸಿನಿಮಾದಲ್ಲಿ ಹೇಳಿರುವಂತೆ ಆಗಬಹುದು ಅಷ್ಟೆ. ತಾತ್ಕಾಲಿಕವಾಗಿ ಬಳ್ಳಾರಿ ನಮಗೆ ಸೇರಿದೆ. ಅಣ್ಣ ತಮ್ಮಂದಿರಂತೆ ನಾವು ನಡೆದುಕೊಂಡು ಹೋಗುವುದಾದರೆ ಮುಂದೆ ಆಡಳಿತ ಹೇಗೆ ನಡೆಯುತ್ತದೆ ದು ನೋಡಿಕೊಂಡು ಯಾವ ಏರ್ಪಾಡನ್ನಾದರೂ ಮಾಡಬಹುದು.

ಶ್ರೀ ಎಚ್. ಸಿ ಲಿಂಗಾರೆಡ್ಡಿ (ಮಾಲೂರು).—ಅಧ್ಯಕ್ಷರೇ, ಬಹುಜನ ತೆಲುಗರುಳ್ಳ ಕೋಲಾರ ಜಿಲ್ಲೆಯಿಂದ ಬರತಕ್ಕ ನಾನು ಈ ಸಭೆಯಲ್ಲಿ, ಈ ವಿಷಯದಲ್ಲಿ ಸ್ವಲ್ಪ ಮಟ್ಟಿಗೆ ಸವಿಸ್ತಾರವಾಗಿ ಮಾತನಾಡಬೇಕೆಂದಿದ್ದೆ. ಆದರೆ ಅಧ್ಯಕ್ಷರು ಸ್ವಲ್ಪವೇ ಕಾಲಕೊಟ್ಟಿದ್ದಾರೆ.

ಈ ವಿಷಯದಲ್ಲಿ ನನ್ನ ಸ್ನೇಹಿತರು ಭಾಷಣ ಮಾಡುತ್ತಿರುವುದನ್ನು ನೋಡಿದರೆ, ಇಂಡಿಯಾ ದೇಶದಲ್ಲಿ ಸ್ವಾತಂತ್ರ್ಯ ಬಂದ ಮೇಲೆ ಪ್ರತಿಯೊಂದು ಪ್ರಾಂತವೂ ಒಂದು independent ರಿಪಬ್ಲಿಕ್ ಆಗಿ, ಒಂದೊಂದು ಭಾಷೆಯವರೂ ಕೂಡ ನಾವೆಲ್ಲಾ ಒಂದಾಗಬೇಕು, ನಾವೆಲ್ಲಾ ಒಂದಾಗಬೇಕು ಎಂದು Sovereign Independent Republic ಗಳಂತೆ ಹೋರಾಟ ಮಾಡುವ ಹಾಗಾಗಿ ಎಲ್ಲಿ ಒಂದು ದೊಡ್ಡ ಗೊಂದಲವೇ ನಡೆಯುತ್ತದೋ ಎಂದು ನನಗೆ ಬಹಳ ಗಾಬರಿಯಾಗಿದೆ. ಆಂಧ್ರರಿಗೂ ತಮಿಳರಿಗೂ ಮತ್ತು ಮೊನ್ನೆಮೊನ್ನೆ ಬಳ್ಳಾರಿಯಲ್ಲಿ ಕನ್ನಡಿಗರಿಗೂ ತೆಲುಗರಿಗೂ ಆದ ಗಲಭೆಯನ್ನು

ನೋಡಿದರೆ ನಿಜವಾಗಿಯೂ ಸ್ವಾತಂತ್ರ್ಯ ಏಕೆ ನಮಗೆ ಬಂತೋ ಎಂದೆನಿಸುತ್ತದೆ. ಅದರಲ್ಲೂ ಮೈಸೂರು ಸಂಸ್ಥಾನದಲ್ಲಿ ಹಾಗೂ ಭಾರತದಲ್ಲಿ ಪಾಂಚವಾರ್ಷಿಕ ಯೋಜನೆಯನ್ನು ಕಾರ್ಯಗತ ಮಾಡಬೇಕಾಗಿದೆ ಮತ್ತು ದೇಶದ ಸಾಮಾನ್ಯ ಜನಗಳ ಆರ್ಥಿಕ ಪರಿಸ್ಥಿತಿಯನ್ನು ಉತ್ತಮಪಡಿಸಬೇಕೆಂದು ನಾವು ಶ್ರಮಿಸುತ್ತಿದ್ದೇವೆ. ಇಂಥ ಸಂದರ್ಭದಲ್ಲಿ ಜಾತಿ ಜಾತಿಗಳು ಹೊಡೆದಾಡದೆ, ಜಾತಿ ಸಾಮರಸ್ಯವನ್ನು ಹೇಗೋ ಸಾಧಿಸಿಕೊಂಡು ಹೋಗಬೇಕೆಂದು ರಾಜ್ಯಾಂಗದಲ್ಲಿ ಅಡಕಮಾಡಿ ಮುಂದುವರಿಯಬೇಕೆಂದು ಪ್ರಯತ್ನ ಮಾಡುತ್ತಿದ್ದೇವೆ. ಹೀಗಿರುವಾಗ ಪ್ರೊವಿನ್ಷಿಯಲಿಸಂ, ಲಿಂಗ್ವಿಸಂ ಮುಂತಾದುವುಗಳನ್ನು ತಲೆಯೆತ್ತುವುದಕ್ಕೆ ಬಿಟ್ಟರೆ ಮುಂದೆ ಏನೇನು ಗಲಭೆಗಳು ನಡೆಯುತ್ತವೆಯೋ ಎಂದು ನನಗೆ ಶಂಕೆಯಾಗುತ್ತಿದೆ. ನಾವೆಲ್ಲಾ ಭಾರತೀಯರು; ಯಾವ ಪ್ರಾಂತ್ಯದಲ್ಲಿದ್ದರೇನು, ಪ್ರಾಂತ್ಯಮನೋಭಾವ ಬೇಡ, ನಮ್ಮ ಶಕ್ತಿಸಾಮರ್ಥ್ಯಗಳನ್ನು ದೇಶವನ್ನು ಕಟ್ಟುವುದಕ್ಕೆ ಉಪಯೋಗಿಸಬೇಕು. ಆದ್ದರಿಂದ ಕನ್ನಡ ಭಾಷೆಯವರೆಲ್ಲಾ ಒಂದಾಗಬೇಕು, ತಮಿಳು ಭಾಷೆಯವರೆಲ್ಲಾ ಒಂದಾಗಬೇಕು ಎನ್ನುವಂಥ ಸಂಕುಚಿತ ಶಕ್ತಿಗಳು ದೇಶದಲ್ಲಿ ಬೆಳೆಯುವುದಕ್ಕೆ ಅವಕಾಶಕೊಡುವುದು ನಮ್ಮ ದೇಶಕ್ಕೇ ಅನರ್ಥಕಾರಿಯೆಂದು ನನಗನ್ನಿಸುತ್ತದೆ. ಈ ಒಂದು ಮುಖ್ಯ ವಿಷಯವನ್ನು ತಿಳಿಸುವುದಕ್ಕೇ ನಾನು ಆತುರಪಟ್ಟು ನಿಂತೆ. ನಿಜ, ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ಸಿನವರು ಭಾಷಾವಾರು ತತ್ವವನ್ನು ಒಪ್ಪಿಕೊಂಡು ಬಂದಿದ್ದಾರೆ. ಆದರೆ ದೇಶಕ್ಕೆ ಸ್ವಾತಂತ್ರ್ಯ ಬಂದ ಮೇಲೆ ಕಾರ್ಯತಃ ಈ ತತ್ವದ ಪರಿಣಾಮ ಜನರ ಮೇಲೆ ಏನಾಗುತ್ತದೆ ಎಂಬ ದೃಷ್ಟಿಯಿಂದ ಈ ವಿಷಯಕ್ಕೆ ಹೆಚ್ಚು ಗಮನ ಕೊಡದೆ, ಕೇವಲ ಭಾಷಾವಾರು ಪ್ರಾಂತರಚನೆಗೆ ಪ್ರಾಧಾನ್ಯ ಕೊಡದೆ, ಆಡಳಿತ ದೃಷ್ಟಿಯಿಂದ ಚಿಕ್ಕ ಚಿಕ್ಕವಾದ ರಾಜ್ಯಗಳಿದ್ದರೆ ಚೆನ್ನಾಗಿ ಕೆಲಸ ಮಾಡಬಹುದೆಂದು ಮನಗಂಡು ಅಂಥ ರಾಜ್ಯಗಳನ್ನು ಕಟ್ಟಬೇಕೆಂಬುದರ ಕಡೆಗೆ ಗಮನ ಕೊಡುತ್ತಿದ್ದಾರೆಂಬ ಅಂಶದ ಕಡೆಗೆ ಮಾನ್ಯಸದಸ್ಯರ ಗಮನವನ್ನು ಸೆಳೆಯಬೇಕೆಂದಿದ್ದೇನೆ. ಅದರಂತೆ ಭಾಷಾವಾರು ಪ್ರಾಂತ್ಯವೆಂದು ಅವರೀಗ ಭಾಷೆಗೆ ಗಮನ ಕೊಡುತ್ತಿಲ್ಲ. ಆಡಳಿತದ ಹಿತದೃಷ್ಟಿಯಿಂದ ದೇಶವನ್ನು ವಿಂಗಡಣೆ ಮಾಡುವುದರ ಕಡೆಗೆ ಅವರ ಗಮನವಿದೆ. ಇದು ದೇಶಕ್ಕೆ ಬಹಳ ಒಳ್ಳೆಯದು. ಆ ರೀತಿಯಾಗಿ ಮಾಡಬೇಕೆಂದು ನಾನು ಮೈಸೂರು ಸರ್ಕಾರದವರಿಗೆ ಸೂಚನೆ ಕೊಡುತ್ತೇನೆ. ಮಾನ್ಯಸದಸ್ಯರೆಲ್ಲರೂ ಇದಕ್ಕೆ ಒಪ್ಪಬೇಕೆಂದು ನನ್ನ ಪ್ರಾರ್ಥನೆ.

ಶ್ರೀ ಬಿ. ಮಾಧವಾಚಾರ್ (ಭದ್ರಾವತಿ).—ಮಾನ್ಯ ಅಧ್ಯಕ್ಷರೆ, ಈ ಆಂಧ್ರರಾಜ್ಯದ ಮಸೂದೆಯನ್ನು ಸ್ವಾಗತಿಸುತ್ತಾ ಇಲ್ಲಿಗೆ ಸೇರತಕ್ಕ ಬಳ್ಳಾರಿ ಪ್ರಾಂತದ ನಾಗರಿಕರ ಮತ್ತು ಅಲ್ಲಿನ ಸಮಸ್ತ ವಿಷಯಗಳ ಬಗ್ಗೆಯೂ ಮಾತಾಡಲು ಪ್ರಯತ್ನಪಟ್ಟರೆ ಬಹಳ ಕಾಲವಾಗುವುದೆಂದು ಭಾವಿಸಿ, ಅವುಗಳನ್ನೆಲ್ಲಾ ವಿವರಿಸದೆ ಸಂಕ್ಷೇಪವಾಗಿ ಒಂದೆರಡು ವಿಷಯಗಳನ್ನು ಮಾತ್ರ ಹೇಳಿ ಮುಗಿಸುತ್ತೇನೆ.

ಈಗ ಈ ಆಂಧ್ರರಾಜ್ಯ ಮಸೂದೆ ನಮ್ಮ ಮುಂದೆ ಬರಲಿಕ್ಕೆ ಕಾರಣೀಭೂತವಾದ ಐತಿಹಾಸಿಕ ಮತ್ತು ರಾಜಕೀಯ ಘಟನೆಗಳನ್ನು ಮರೆತುಬಿಟ್ಟು ಅನೇಕ ವಿಷಯಗಳನ್ನು ಪ್ರಸ್ತಾಪಮಾಡಿದ್ದೇವೆ. ಭಾಷಾವಾರು ಪ್ರಾಂತ ನಿರ್ಮಾಣದ ಪ್ರಶ್ನೆಯನ್ನು ಕಾಂಗ್ರೆಸ್ಸು ಒಪ್ಪಿತ್ತು. ಅಲ್ಲದೆ ಆ ಬಗ್ಗೆ ಅನೇಕ ಪ್ರಯತ್ನಗಳು ನಡೆದು ಇವೊತ್ತು ಆಂಧ್ರರು ಆಂಧ್ರರಾಜ್ಯ ನಿರ್ಮಾಣ ಮಾಡಿಕೊಂಡಿದ್ದಾರೆ. ಈ ಬಗ್ಗೆ ಏನೇನು ಪ್ರಯತ್ನಗಳು ನಡೆದಿವೆಯೆಂಬುದನ್ನು ಯಾರೂ ಮರೆಯುವಂತಿಲ್ಲ. ಇದು ಜನತೆಗೆ ಸಂಬಂಧಪಟ್ಟ ಪ್ರಶ್ನೆಯೇ ಅಲ್ಲ ಎನ್ನುವುದು ವಿವೇಕವಲ್ಲ. ಯಾವ ಮನುಷ್ಯನೇ ಆಗಲಿ ತನ್ನ ಭಾಷೆಯಲ್ಲಿ ತನ್ನ ಯೋಗಕ್ಷೇಮದ ಹೊಣೆಯನ್ನು ಹೊತ್ತ ಸರ್ಕಾರ ವ್ಯವಹರಿಸುವುದನ್ನು ಬೇಡವೆನ್ನುತ್ತಾನೆ ! ಅದನ್ನು ಯಾರೂ ಉಪೇಕ್ಷಿಸುವುದಿಲ್ಲ. ಭಾಷಾವಾರ ಪ್ರಾಂತದ ಪ್ರಾಮುಖ್ಯತೆಯ ಅರಿವು ನಮ್ಮ ಮೈಸೂರಿನ ಜನರಿಗೆ ಎಷ್ಟುಮಟ್ಟಿಗೆ ಅರ್ಥವಾಗದಿದ್ದರೂ ಕೂಡ ಮೈಸೂರಿನ ಪ್ರದೇಶದವರು ಭಾಷೆಯ ಅವಶ್ಯಕತೆಯ ವಿಷಯದಲ್ಲಿ ನೋವನ್ನು ಅನುಭವಿಸಿ ಭಾಷಾವಾರು ಪ್ರಾಂತರಚನೆಗೆ ಅವರು ಆತುರರಾಗಿದ್ದಾರೆ. ಇಂಥ ಸಂದರ್ಭದಲ್ಲಿ ಶ್ರೀ ಹನುಮಂತಯ್ಯನವರು ಒಂದು ಉದಾತ್ತವಾದ ಸೂತ್ರವನ್ನು ಜನತೆಯ ಮುಂದಿಟ್ಟು ಮೈಸೂರು ಜನತೆಯ ಕೀರ್ತಿಯನ್ನು ಹೆಚ್ಚಿಸಿದ್ದಾರೆಂದು ಹೇಳಬಹುದು. ಹಾಗೂ ಮೊದಲಿಂದಲೂ ಮೈಸೂರಿನಲ್ಲಿ ಭಾಷಾವಾರು ಪ್ರಾಂತ್ಯದ ಚಳವಳಿಗಾಗಿ ಸಾಹಿತ್ಯ ಮತ್ತು ಸಂಸ್ಕೃತಿ ಪ್ರಚಾರಕರು ಅಮೂಲ್ಯ ಕಾಣಿಕೆಯನ್ನು ಸಲ್ಲಿಸಿದ್ದಾರೆ. ಖ್ಯಾತರಾದ ಶ್ರೀ ಬಿ. ಎಂ. ಶ್ರೀಕಂಠಯ್ಯನವರು, ಶ್ರೀ ಕೆ ವಿ. ಪುಟ್ಟಪ್ಪ ಮೊದಲಾದವರು ಕನ್ನಡ ಪ್ರಾಂತರಚನೆಯ ವಿಚಾರದಲ್ಲಿ ಎಷ್ಟೋ ಜಾಗೃತಿಯನ್ನು ಉಂಟುಮಾಡಿರುತ್ತಾರೆ. ಇವೊತ್ತು ಮುಖ್ಯಮಂತ್ರಿಗಳು ಯಾವ ಭಾಗದವರು ನಮ್ಮಲ್ಲಿಗೆ ಬರುವುದಾದರೂ ಅವರನ್ನು ಸ್ವಾಗತಿಸೋಣವೆಂದು ಹೇಳುತ್ತಿರುವುದರಿಂದ ಭಾಷಾವಾರು ಪ್ರಾಂತದ ಕಾರ್ಯ ಸುಲಭವಾಗಿದೆಯೆಂದು ಹೇಳಬಹುದು. ಅನೇಕ ಅಂಶಗಳನ್ನು ಸಂಗ್ರಹಿಸಿ ಕರ್ಣಾಟಕ ಪ್ರಾಂತ ನಿರ್ಮಾಣ ಮಾಡಿದರೆ ಅದೊಂದು ಸಂಪದ್ಯುಕ್ತವಾದ ರಾಷ್ಟ್ರವಾಗಿ ತನ್ಮೂಲಕ ಭಾರತ ರಾಷ್ಟ್ರನಿರ್ಮಾಣಕ್ಕೆ ಅನುಕೂಲವಾದ ಘಟಕ ಆಗುವುದೆಂದು ನಿರ್ಧರಿಸಿದ್ದಾರೆ, ಆದರೆ ನಾವು ಇವೊತ್ತು ಈ ವಿಷಯದಲ್ಲಿ ಜಿಜ್ಞಾಸೆ ಮಾಡಬೇಕಾಗಿಲ್ಲ. ಏಕೆಂದರೆ ಕೇಂದ್ರ ಸರ್ಕಾರದವರೇ ಒಂದು ಕಮಿಷನ್ನನ್ನು ಮಾಡಿ ನಮ್ಮ ಯಾವ ವಾದವಿದ್ದರೂ ಅವರ ಮುಂದೆ ಮಂಡಿಸಿ ನಮ್ಮ ಕಾರ್ಯವನ್ನು ಸಾಧಿಸಿಕೊಳ್ಳಶಕ್ಯ ಅವಕಾಶ ಕಲ್ಪಿಸಿಕೊಟ್ಟಿದ್ದಾರೆ. ಈಗ ಆ ವಿಷಯದಲ್ಲಿ ಚರ್ಚೆ ನಡೆಸುವುದು ಅನಾವಶ್ಯಕ.

ಶ್ರೀ ವಿ. ಆರ್. ನಾಯ್ಡು (ಮಲ್ಲೇಶ್ವರಂ).—ಮಾನ್ಯ ಅಧ್ಯಕ್ಷರಲ್ಲಿ ಒಂದು ವಿನಂತಿ. ಈ ಆಂಧ್ರರಾಜ್ಯದ ಮಸೂದೆಯನ್ನು ಸ್ವಾಗತಿಸುವಾಗ ತೆಲುಗಿನಲ್ಲಿ ಮಾತನಾಡುವುದಕ್ಕೆ ಅವಕಾಶ ಕೊಡಬೇಕು. (ನಗು !)

ಆದರೂ ಎರಡು ಮಾತು ಹೇಳಬೇಕೆನ್ನಿಸಿತು, ಹೇಳುತ್ತೇನೆ. ಇದುವರೆಗೂ ಅನೇಕರು ಭಾಷಣ ಮಾಡಿದ್ದಾರೆ, ನಾನೂ ಕೇಳುತ್ತಾ ಕುಳಿತಿದ್ದೆ. ಸಭೆಯಲ್ಲಿ ಸಾಂಪ್ರದಾಯಿಕವಾಗಿ ಭಾಷಣ ಮಾಡಬೇಕು. ಆದರೆ ಈಗ ನಮ್ಮ ಮುಂದೆ ಒಂದು ವಿಷಯವಿದೆ. ಇದರಲ್ಲಿ ಆಂಧ್ರ, ತಮಿಳು, ಕರ್ಣಾಟಕ ಎಲ್ಲವೂ ಇದೆ. ಇವರೆಲ್ಲರೂ ಜಗಳ ಮಾಡುತ್ತಾರೆ: ಆಗ ನಮಗೊಬ್ಬ ಕಮ್ಯಾಂಡರ್ ಇನ್ ಚೀಫ್ ಬೇಕಾಗುತ್ತದೆ. ಆ ಪದವಿಗೆ ಕರ್ಣಾಟಕಕ್ಕೆ ನಮ್ಮ ಮುಖ್ಯ ಮಂತ್ರಿಗಳಾದ ಶ್ರೀ ಹನುಮಂತಯ್ಯನವರೇ ಇರಬೇಕು. ಈ ಹೊತ್ತೋ ನಾಳೆಯೋ ಕರ್ಣಾಟಕಕ್ಕಾಗಿ fighting ಶುರು ಆಗುತ್ತದೆ. ಅದಕ್ಕೆ ಶ್ರೀ ಹನುಮಂತಯ್ಯನವರು ಕಮ್ಯಾಂಡರ್ ಇನ್ ಚೀಫ್ ಆದರೆ, ಅಸೆಂಬ್ಲಿಯ ಸದಸ್ಯರು ಒಬ್ಬೊಬ್ಬರೂ ಗ್ರೂಪ್ ಕ್ಯಾಪ್ಟನ್‌ಗಳಾಗಬೇಕು.

(ಶ್ರೀ ಎ. ಆರ್. ನಾಯ್ಡು.)

ಹಿಂದೆ ಸಂಪ್ರದಾಯ ಬಂದಿತ್ತು; ಯುದ್ಧವಾಗುತ್ತದೆಂದು ತಿಳಿದರೆ ಕೋಟೆಯನ್ನು ರಿಪೇರಿ ಮಾಡಿಕೊಂಡು ಕಾಯುತ್ತಿದ್ದರು. ಈಗ ಆಂಧ್ರರು ತಯಾರಾಗಿದ್ದಾರಂತೆ. ಕರ್ನಾಟಕದವರೇನೂ ಕಡಮೆಯಿಲ್ಲವೆಂದು ತೋರಿಸಬೇಕು. ಇದೇ ನನ್ನ ಭಾಷಣ (ನಗು!)

ಶ್ರೀ ಆರ್. ಮುನಿಸ್ವಾಮಯ್ಯ (ಬೆಂಗಳೂರು ಉತ್ತರ—ಅನುಸೂಚಿತ ಜಾತಿಗಳು).—ಸ್ವಾಮಿ, ಬಳ್ಳಾರಿಯಿಂದ ಬರತಕ್ಕ ಎಲ್ಲಾ ಜನರನ್ನೂ ಸ್ವಾಗತಿಸಬೇಕಾಗಿದೆ. ಭಾಷಾವಾರು ದೃಷ್ಟಿಯಿಂದ ಬಳ್ಳಾರಿಯ ಕೆಲವು ತಾಲ್ಲೂಕುಗಳನ್ನು ಮೈಸೂರು ದೇಶಕ್ಕೆ ಸೇರಿಸಿರುವಂತೆ ಕಾಣುತ್ತದೆ. ಆದರೆ ಆಡಳಿತ ದೃಷ್ಟಿಯಿಂದ ನೋಡಿದರೆ, ಉಳಿದ ಮೂರು ತಾಲ್ಲೂಕುಗಳನ್ನೂ ಸೇರಿಸಿದ್ದರೆ ಆಡಳಿತ ನಡೆಸುವುದಕ್ಕೆ ಅನುಕೂಲವಾಗುತ್ತಿತ್ತು. ನಾನು ಅಲ್ಲಿಗೆ ಹೋಗಿದ್ದೆ. ಈಗ ಬಳ್ಳಾರಿ ಜಿಲ್ಲೆಗೆ ಸೇರದೇ ಇರತಕ್ಕ ಮೂರು ತಾಲ್ಲೂಕುಗಳ ಜನರು ಅವರನ್ನು ಆಂಧ್ರಕ್ಕೆ ಸೇರಿಸಿರುವುದನ್ನು ಕುರಿತು 'ನಾವು ಮೈಸೂರಿಗೆ ಸೇರಬೇಕಾಗಿತ್ತು, ಏನೋ ಕಾರಣದಿಂದ ಇಂಡಿಯಾ ಸರ್ಕಾರದವರು ಆಂಧ್ರಕ್ಕೆ ಸೇರಿಸಿದ್ದಾರೆ' ಎಂದು ಹೇಳಿದುದು ನನಗೆ ಜ್ಞಾಪಕವಿದೆ. ಈಗ ನಮ್ಮ ಸಂಸ್ಥಾನಕ್ಕೆ ಸೇರಲಿರುವವರನ್ನು ಸ್ವಾಗತಿಸುತ್ತಾ ಒಂದೆರಡು ವಿಷಯಗಳನ್ನು ಹೇಳುತ್ತೇನೆ.

ಬಳ್ಳಾರಿ ಜಿಲ್ಲೆ ಕೊರತೆಯ ಪ್ರದೇಶವೆಂದು ಅನೇಕ ವೇಳೆ ನಮಗೆ ಭಯ ಬರುತ್ತದೆ ಏಕೆಂದರೆ. ನಮ್ಮಲ್ಲಿ ಡಿಸ್ಟ್ರಿಕ್ಟ್ ಇರುವ ಪ್ರದೇಶಗಳು ಈಗ ಹೆಚ್ಚಾಗಿವೆ, ಅದನ್ನೂ ಕಟ್ಟಿಕೊಂಡರೆ ಹೇಗೆ ಸುಧಾರಿಸುವುದು ಎಂಬ ಪ್ರಶ್ನೆ ಬರುತ್ತದೆ. ಆದರೆ ಇದಕ್ಕೆ ಕಾರಣವಿಲ್ಲ. ಆ ಪ್ರದೇಶದಲ್ಲಿರುವ ಅರಣ್ಯ ಸಂಪತ್ತನ್ನು ನೋಡಿದರೆ, ತುಂಗಭದ್ರಾ ಯೋಜನೆಯನ್ನು ನೋಡಿದರೆ, ಅದನ್ನೆಲ್ಲಾ ರೂಢಿಸಿಕೊಳ್ಳುವ ಕಾಲಕ್ಕೆ ನಮ್ಮ ದೇಶದ ಈಗಿನ ಅಭಾವಪ್ರದೇಶಗಳಿಗೆಲ್ಲಾ ಆಹಾರ ಒದಗಿಸಲು ಅನುಕೂಲವಾಗುವುದಲ್ಲದೆ ಇತರ ಅನುಕೂಲಗಳನ್ನೂ ಪಡೆಯಲು ಅವಕಾಶವಿದೆಯೆಂದು ತೋರುತ್ತದೆ. ಉಳಿದ ವಿಷಯಗಳನ್ನು ನೋಡಿದರೆ ನಮ್ಮ ಸಂಸ್ಥಾನದಲ್ಲಿರುವ ಹಾಗೆಯೇ ಅಲ್ಲಿಯೂ ಕೂಡ ಪ್ರತಿಹಳ್ಳಿಯಲ್ಲಿಯೂ ಪಾಠಶಾಲೆಯಿರುವಂತೆ ಕಾಣುತ್ತದೆ. ಹೇಗೆಂದರೆ 571 ಹಳ್ಳಿಗಳಿಗೆ 514 ಪಾಠಶಾಲೆಗಳಿವೆ, ಅಲ್ಲದೆ ಒಂದು ಇಂಟರ್‌ಮೀಡಿಯೆಟ್ ಕಾಲೇಜು, ಎರಡು ಟ್ರೈನಿಂಗ್ ಕಾಲೇಜುಗಳೂ ಇವೆ. ವಿದ್ಯಾಭ್ಯಾಸದಲ್ಲಿ ಅದು ಹಿಂದುಳಿದಿಲ್ಲ. ನಮ್ಮ ದೇಶದಲ್ಲಿರುವ ಹಾಗೆ ಅಲ್ಲಿಯೂ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ ಕೊಟ್ಟಿದ್ದಾರೆ. ಜನತೆಯಲ್ಲಿ ಬಹುಮಂದಿ ವಿದ್ಯಾವಂತರು ಎಂಬುದು ನಮಗೆ ಒದಗಿಸಿರುವ ಪಟ್ಟಿಯಿಂದ ತಿಳಿದುಬರುತ್ತದೆ. ಆದರೂ ನಮ್ಮ ಆಡಳಿತಕ್ಕೂ ಅವರ ಆಡಳಿತಕ್ಕೂ ವ್ಯತ್ಯಾಸವುಂಟು. ಸಹಾನುಭೂತಿಯಿಂದ ನಡೆದರೆ, ಅವರೂ ನಾವೂ ಸೇರಿಕೊಂಡು ಸೌಹಾರ್ದದಿಂದ ರಾಜ್ಯಭಾರ ನಡೆಸಿಕೊಂಡು ಸುಖವಾಗಿ ಬಾಳಬಹುದೆಂದು ನನಗನ್ನಿಸುತ್ತದೆ.

The House adjourned for Lunch at Thirty-five Minutes past Three of the Clock and reassembled at Four of the Clock.

[Mr. SPEAKER in the Chair.]

Sri K. HANUMANTHAIYA.—Sir, I have listened with great interest and pleasure to the speeches made by the Hon'ble Members on this historic Bill. I am glad, Sir, that there has been practically unanimity in welcoming this Bill. Different points of view have not affected the hearty welcome that is being extended to the people of the seven taluks of Bellary District. Therefore, Sir, I feel that this House has discharged its historic duty so satisfactorily that generations to come will be thankful and grateful to the stand that has been taken by this House.

Sir, there has been what is called an advocacy for linguistic provinces. There have been apprehensions expressed in regard to the advisability of linguistic provinces. Sir, Mysore State, from the very beginning, has taken what I characterise as a very sober and practical view in the matter. You would kindly pardon me if I give a little historical background to this Bill. The Mysore Constituent Assembly was elected for the purpose of framing a constitution for the Mysore State. Later developments made the Indian Constituent Assembly itself to take over this task and it has discharged its duty so satisfactorily in the framing of a Constitution to which all of us are bound today. Nevertheless, Sir, it would be of interest to know what transpired in the Constituent Assembly of the Mysore State.

Sir, in the Objective Resolution of the Mysore Constituent Assembly, there was a clause which referred to this question. It reads as follows:

> "There shall be a provision in the Constitution for the integration with Mysore of the neighbouring areas in such manner as may be mutually agreed upon between the areas concerned and Mysore in accordance with the provisions laid down by the Constitution for India in this behalf."

Sir, that stand was taken by the members of the Constituent Assembly unanimously. I happend to be one

